Sl. No.	Name of the Institution	Apparatus repairs and renewals 8	Misc. Charges 9	Total Expenditure 10	Year of expenditure 11
		Rs.	Rs.	Rs.	
1	Victoria Hospital, Bangalore.	...	1,80,677	18,79,387	61–62
2	Bowring Hospital, Bangalore.	...	88,690	11,38,310	61–62
3	Karnatak Medical College Hospital, Hubli.	2,35,103	Nill	8,72,113	61–62
4	Wenlock Hospital, Mangalore.	6,789	...	9,64,189	61–62

MR. SPEAKER.—Let us proceed to the next item of the business.

MYSORE CINEMAS (REGULATION) BILL, 1962.

Motion to consider.

SRI R. M. PATIL (Minister for Home).—Mr. Speaker, Sir, I beg to move :

" That the Mysore Cinemas (Regulation) Bill, 1962, be taken into consideration "

MR. SPEAKER.—Motion moved :

" That the Mysore Cinemas (Regulation) Bill, 1962, be taken into consideration. "

Before I call upon the Hon'ble Minister, to speak I should like to mention that some requests were made to me with regard to our sitting on Monday. May I know what exactly is the sense of the House ?

SRI S. NIJALINGAPPA (Chief Minister).—On Monday, I think we can have a holiday, Sir. In lieu of it, I think Members will be agreeable to sit for a full day next Saturday and thus make it up. The holiday on the 17th instant is an important holiday. Next Saturday we can sit up to 12-30 p.m.

MR SPEAKER.—That is all right. The convenience of Members is of primary importance. But There is one little fly in the ointment. Saturday is devoted to non-official business.

SRI S. NIJALINGAPPA.—The only appeal I can make is that the members may be brief.

Mr. SPEAKER.—What I suggest is that we need not have non-official business on Saturday. We can give them some other day.

Sri S. NIJALINGAPPA.—That can also be done.

Sri V. S. PATIL (Belgaum—I).—Non-official business is set apart for Saturday. In the name of a holiday on Monday, we are not prepared to give up our claim to non-official business on Saturday.

Mr. SPEAKER.—The Hon'ble members are entitled to a non-official business day in the week. I do not propose to allow any encroachment upon that. Nothing happens if it is put down for some other day. Now the hon. Minister for Home will speak on the Bill.

† Sri R. M. PATIL.—The proposed legislation is intended to make a common uniform law, law for the entire State. At present there are five legislations—the Mysore Cinemas Act, 1952 in old Mysore area; the Madras Cinemas Act, 1955 in South Kanara ; the Bombay Cinames Act, 1953 in the four districts of Former Bombay Karnatak ; the Hyderabad Cinemas Act, 1952 in three districts of Hyderabad Karnatak ; and part III of the Cinematograph Act, 1952 as it is in force in Coorg District. To amalgamate to all these five laws and to bring uniformity in regulating the cinema shows and also construction of buildings meant for cinemas, this legislation has been proposed. The main features of the Bill are: under clause 3, the District Magistrate is the licensing authority unless Government appoints any other authority for this purpose. Clause 4 prohibits exhibition by means of cinematograph elsewhere than in a place licensed under this Act. Sub-clause (1) of clause 6 specifies the matters to be considered by the licensing authority while deciding the grant or refusal of license and also under sub-clause (2) the licensing authority may limit the number of places in any area in respect of which licences under this Act may be granted. The licence issued under this Act is made personal under clause 8 to the person to whom it is granted and a transfer is invalid unless approved by the licensing authority who shall not refuse its approval to the transfer or assignment of a licence except on the ground that the transferee or assignee has not sufficient status and previous experience to hold a licence. Under clause 9, any person aggrieved by the decision of the licensing authority may appeal to the prescribed authority. Clause 10 requires any person who intends to use any place for the exhibition of films or to construct or reconstruct any building for the exhibition, or to instal any machinery, to apply to the licensing authority for permission. Clause 14 gives power to the licensing authority to suspend exhibition of films in certain cases. Clause 15 provides for punishment where the person in charge of a cinematograph contravenes certain provisions of the Act. Power is given under clause 16 for revoking a licence when the holder is convicted. Clause 19 give power to Government to exempt any cinematograph exhibition or any place where a cinematograph exhibition is given from any of the provisions of this Act, if such exhibition is found to be necessary or expedient in public interest.

There are certain provisions which are in force in certain areas while those very provisions were not at all embodied in the other provisions of those Acts and as such we have taken into consideration the Mysore Cinematograph Act as a basis and the supplementaries that are found in the Mysore Cinematagraph Act have been taken from other Acts and incorporated in the present Bill. For example, I may say that clause 5 of the Bill corresponds to section 3 of Mysore, Bombay and Madras Acts. That is common in three areas. Sub-clause (1) of clause 6 is a new clause which has been taken from the Madras Act. Similarly, sub-clause (2) of claule 6 has been taken from the Madras Act and clause 7 also has been taken from the Madras Act. Clause 8 is a new clause which has been taken from rule 129 of the Bombay Rules. There is no corresponding section either in Mysore, Madras or in Bombay Cinema Regulations. It is necessary to make a provision as to the procedure to be followed if the licensee dies during the current period of the license. As regards clause 11, this follows section 6 of the Madras Act and section 5(4) of Mysore Act, Clause 14 follows section 6(1) and (2) of Mysore Act and section 7 of the Madras Act. In respect of penalties mentioned in sub-clause (1) of clause 15, this followed section 8 of Madras Act and section 7 of Mysore Act. As regards clause 18, it follows Bombay Rule No. 11. It is necessary to add to sub-clause (b) of Rule 9(2) of Bombay Rules to regulate the sale of tickets. This follows section 10 of Mysore Act, section 11 of Madras Act and section 10 of Bombay Act.

The repealing clauses also are there. With these few words, I crave the indulgence of the House to consider this Bill.

1.30 P.M.

Mr. SPEAKER.—So, there is nothing radically new in this Bill ?

Sri R. M. PATIL.—No Sir. All these provisions are familiar and are found in one or the other Acts that are in force now.

Mr. SPEAKER.—The relevant literature may be placed on the Table of the Reading Room for the benefit of the Members.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಗಳೆ, ಐದು ಪ್ರದೇಶಗಳಲ್ಲಿರತಕ್ಕಂಥ ಕಾನೂನುಗಳನ್ನು ಅನ್ವಯಮಾಡಿ, ಇವತ್ತು ಏಕರೂಪತೆಯಲ್ಲಿ ಈ ಸಭೆಯ ಮುಂದೆ ಮಾನ್ಯ ಗೃಹ ಸಚಿವರು ಈ ಚಿತ್ರಮಂದಿರಗಳಿಗೆ ಸಂಬಂಧಪಟ್ಟಂಥ ಮಸೂದೆ ಕಾನೂನನ್ನು ಮಂಡನೆ ಮಾಡಿದ್ದಾರೆ. ಇವತ್ತಿನ ದಿವಸ ಸಿನಿಮಾಗಳ ಅವಶ್ಯಕತೆ ನಮ್ಮ ದೇಶದಲ್ಲಿ ಪ್ರಾಮುಖ್ಯವಾಗಿ ಬೆಳೆದು ಬಂದಿದೆ. ಇವತ್ತು ಸಿನಿಮಾಗಳಲ್ಲಿರತಕ್ಕಂಥ ಮನರಂಜನೆ ದೇಶದ ಬಡಜನತೆಯ ಒಂದು ಮನೋರಂಜನೆ ವಸ್ತುವಾಗಿ ಬೆಳೆಯುತ್ತಾ ಇದೆ. ಇವತ್ತು ಪ್ರಧಾನ ನಗರಗಳಲ್ಲಿ ನಾವು ನೋಡುತ್ತೇವೆ. ಯಾರಿಗೆ ವಸತಿ ಸೌಕರ್ಯವಿಲ್ಲವೋ, ಯಾರಿಗೆ ಮನೆ ಸಿಕ್ಕುವ ಒಂದು ಆಶ್ವಾಸನೆ ಇಲ್ಲವೋ, ಅಂಥ ಜನ ಇವತ್ತು ಬೀದಿಯಲ್ಲಿ ಗಂಟೆಗಟ್ಟಲೆ ''ಕ್ಯೂ'' ನಿಂತು, ಸಿನಿಮಾ ಮಂದಿರಗಳಿಗೆ ಹೋಗಿ ಒಂದೆರಡು ಗಂಟೆ ಕಾಲವಾದರೂ ತಮ್ಮ ಸಂಕಟಗಳನ್ನು ಮರೆತು, ಕಷ್ಟ ಪರಂಪರೆಗಳನ್ನು ಮರೆತು, ಮನರಂಜನೆ ಪ್ರದರ್ಶನಗಳನ್ನು ನೋಡಿ, ತಮ್ಮ ಮನಸ್ಸನ್ನು ಸಂತೋಷಪಡಿಸಿಕೊಳ್ಳತಕ್ಕಂಥ ಒಂದು ಅವಕಾಶವನ್ನು ನಿರೀಕ್ಷೆ ಮಾಡುತ್ತಾರೆ.

[SMT. BASAVARAJESWARI (CHAIRMAN) in the Chair.]

ಇಂಥ ಮನರಂಜನೆ ಕಾರ್ಯವನ್ನು ಏರ್ಪಾಡು ಮಾಡತಕ್ಕಂಥ ಚಿತ್ರಮಂದಿರಗಳನ್ನು ಕಾನೂನಿನ ಪ್ರಕಾರವಾಗಿ, ಯಾವ ರೀತಿ ನಡೆಸಿಕೊಂಡು ಹೋಗಬೇಕು ಎಂದು ಈ ಒಂದು

(ಶ್ರೀ ಎಸ್. ಶಿವಪ್ಪ)

ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಸಿನಿಮ ಬಹುತೇಕವಾಗಿ ಎಲ್ಲ ವರ್ಗದವರಿಗೂ ಒಂದು ಅವಶ್ಯಕವಾದಂಥ ಮನರಂಜನೆ ವಸ್ತುವಾಗಿದೆ. ಆದ್ದರಿಂದ ಚಿತ್ರಗಳ ತಯಾರಿಕೆ ಮತ್ತು ಚಿತ್ರಗಳ ಪ್ರದರ್ಶನ, ಇವೆರಡೂ ಕೂಡ ದೇಶದಲ್ಲಿ ಬಹಳ ಪ್ರಾಮುಖ್ಯವಾಗಿ ಹೆಚ್ಚಿವೆ. ಇವತ್ತು ಸಿನಿಮಾ ನೋಡತಕ್ಕಂಥ ಜನಸಂಖ್ಯೆಗೆ ಬರುವ ಲಾಭ ಮನರಂಜನೆ ಅಷ್ಟೇ ಅಲ್ಲ. ಸಿನಿಮಾ ಮುಖಾಂತರ ನೀತಿಯ ಬೋಧನೆ ಕೂಡ ನಡೆಯತಕ್ಕಂಥ ಕಾಲ ಬಂದಿದೆ.

ಈ ಆಧುನಿಕ ಯುಗದಲ್ಲಿ ಸಿನಿಮಾ ಬಹಳ ಬೆಳೆದುಕೊಂಡು ಹೋಗಿದೆ. ಅದರಲ್ಲಿಯೂ ನಮ್ಮ ಭಾರತ ದೇಶದಲ್ಲಿ ಸಿನಿಮಾ ಕೈಗಾರಿಕೆ ಅನ್ನತಕ್ಕಂಥಾದ್ದು ಪ್ರಪಂಚದಲ್ಲಿಯೇ 2ನೆಯ ಸ್ಥಾನವನ್ನೋ, ಮೂರನೆಯ ಸ್ಥಾನವನ್ನೋ ಪಡೆದಿದೆ ಎಂದು ನಾನು ಕೇಳಿದ್ದೇನೆ. ಅದರಲ್ಲಿಯೂ ಬೆಂಗಳೂರು ನಗರದಲ್ಲಿ ಸಿನಿಮಾಕ್ಕೆ ಹೋಗತಕ್ಕ ಜನಸಂಖ್ಯೆ, ಭಾರತದಲ್ಲಿಯೇ ಮೊದಲನೆಯ ಸ್ಥಾನವನ್ನು ಹೊಂದಿದೆ ಎಂದು ನಾನು ಕೇಳಿದ್ದೇನೆ. ಹೀಗೆ ಈ ಸಿನಿಮಾಕ್ಕೆ ಹೋಗತಕ್ಕ ಜನರ ಸಂಖ್ಯೆ ಬೆಂಗಳೂರು ನಗರದಲ್ಲಿ ಹೆಚ್ಚಿರಲು ಅನೇಕ ಕಾರಣಗಳಿವೆ. ಬೆಂಗಳೂರು ನಗರ ಕಾರ್ಮಿಕರಿಂದ ಕೂಡಿದೆ. ಈ ನಗರದ ಕಾರ್ಮಿಕರಿಗೆ ವಸತಿ ಸೌಕರ್ಯ ಇಲ್ಲದಿರುವುದರಿಂದ ಅವರುಗಳು ಕೆಲ ಗಂಟೆಗಳ ಕಾಲ ಸಿನಿಮಾ ಮಂದಿರಗಳಲ್ಲಿ ಸೊಗಸಾದ ಆರಾಮ ಕುರ್ಚಿಗಳ ಮೇಲೆ ಕುಳಿತು ಸುಖವನ್ನು ಪಡೆಯೋಣವೆಂದು ಹೋಗುತ್ತಾರೆ. ಈ ದೃಷ್ಟಿಯಿಂದ ಊಟವಿಲ್ಲದಿದ್ದರೂ ಚಿಂತೆಯಿಲ್ಲ, ಸಿನಿಮಾ ನೋಡೋಣ ಎಂಬ ಚಟ ಅನೇಕ ಜನರಲ್ಲಿ ಬೆಳೆದು ಬಂದಿದೆ. ಅದು ತಪ್ಪು ಎಂದು ಹೇಳುವ ಹಾಗಿಲ್ಲ. ಈ ಒಂದು ವಿನೋದ, ಒಂದು ಸುಖ, ಒಂದು ಮಂರಂಜನೆ ಪಡೆಯಬೇಕೆಂಬ ಚಪಲ ಕೆಳ ವರ್ಗದವರಲ್ಲಿ ಬೆಳೆದು ಬಂದಿದೆ.

ಎರಡನೆಯದಾಗಿ ವಿದ್ಯಾರ್ಥಿಗಳಲ್ಲಿಯೂ ವಾರಾಂತ್ಯದಲ್ಲಿ, ಸ್ಕೂಲ್ಲು ಕಾಲೇಜುಗಳಲ್ಲಿ ವಿದ್ಯಾಭ್ಯಾಸಂಗ ಮುಗಿಸಿಕೊಂಡು ಒಂದು ದಿವಸ ಸಿನಿಮಾಕ್ಕೆ ಹೋಗಬೇಕೆಂಬ ಚಪಲ ಬೆಳೆದು ಬಂದಿದೆ. ಇದೇ ಭಾವನೆ ಎಲ್ಲ ವರ್ಗದಲ್ಲಿಯೂ ಬೆಳೆದಿದೆ, ಬಾಕಿಯವರಲ್ಲಿಯೂ ವಾರಕ್ಕೆ ಒಂದು ಸಾರಿಯೋ, ತಿಂಗಳಿಗೆ ಒಂದಾವರ್ತಿಯೋ ಸಿನಿಮಾ ಮಂದಿರಕ್ಕೆ ಹೋಗಿ, ಸಾಯಂಕಾಲ 2-3 ಗಂಟೆಗಳ ಕಾಲ ಅಲ್ಲಿ ಸುಖವಾಗಿ ವಿಶ್ರಾಂತಿಯಿಂದ ಕಳೆಯಬೇಕು ಎಂಬ ಅಭ್ಯಾಸ ಇವತ್ತು ದೇಶದಲ್ಲಿ ಬೆಳೆದು ಬರುತ್ತಾ ಇದೆ. ಸಿನಿಮಾಗಳ ಅವಶ್ಯಕತೆ ಕೇವಲ ಪ್ರಧಾನ ನಗರಗಳಲ್ಲಿಯೇ ಅಲ್ಲ, ಎಲ್ಲ ಕಡೆಗಳಲ್ಲಿಯೂ ಹರಡಿ ಬಿಟ್ಟಿದೆ. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಕೂಡ ಸಿನಿಮಾ ಅವಶ್ಯಕತೆ ಜಾಸ್ತಿಯಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಸಿನಿಮಾ ನೋಡುವವರ ಜನಸಂಖ್ಯೆ ಬೆಳೆಯುತ್ತಾ ಇವೆ. ಸರಕಾರದವರು ಕೂಡ ಈ ಸಿನಿಮಾಗಳ ಅಭಿವೃದ್ಧಿ ಸರಾಗವಾಗಿ, ಸುಸೂತ್ರವಾಗಿ, ಕಡಮೆ ಖರ್ಚಿನಲ್ಲಿ ಆಗಿ, ಜನಗಳಿಗೆ ಬೇಕಾದ ಅವಶ್ಯಕತೆಗಳನ್ನು ಮಾಡಿಕೊಡಬೇಕಾಗಿದೆ. ಕಾನೂನನ್ನು ಮಾಡತಕ್ಕಂಥ ಸಂದರ್ಭದಲ್ಲಿ ಕೇವಲ ಪಟ್ಟಣಗಳಿಗೆ ಬೇಕಾದ ಚಿತ್ರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸಿನಿಮಾಗಳ ಕಾನೂನನ್ನು ಮಾಡಿದರೆ ಸಾಲದು, ಚಿತ್ರಮಂದಿರಗಳು ಹಳ್ಳಿ ಹಳ್ಳಿಗಳಲ್ಲಿ ಕೂಡ ಹಳ್ಳಿಗರ ಯೋಗ್ಯತೆ, ಸಾಮರ್ಥ್ಯ ಬೆಳೆಯತಕ್ಕಂಥ ರೀತಿಯಲ್ಲಿ ಕಾನೂನನ್ನು ಮಾಡಬೇಕು. ಈ ದೃಷ್ಟಿಯಿಂದ ಈ ಮಸೂದೆ ದೇಶದಲ್ಲಿ ಚಿತ್ರಮಂದಿರಗಳ ಬೆಳವಣಿಗೆಗೆ ಸಾಧಕವಾಗಿದೆ ಮತ್ತು ಈ ಕಾನೂನಿನಿಂದ ಸಾಮಾನ್ಯ ಹೊಸ ಚಿತ್ರಮಂದಿರಗಳನ್ನು ಸ್ಥಾಪನೆ ಮಾಡುವುದಕ್ಕೆ ಎಷ್ಟುಮಟ್ಟಿನ ಬೆಂಬಲ ಸಿಕ್ಕುತ್ತದೆ ಅನ್ನತಕ್ಕಂಥಾದ್ದನ್ನು ಕೂಡ ನೋಡಬೇಕಾಗಿದೆ.

ಸುಮಾರು 18-20 ಕ್ಲಾಜುಗಳನ್ನೊಳಗೊಂಡ ಈ ಮಸೂದೆಯನ್ನು ತಯಾರು ಮಾಡಿದ್ದೀರಿ. ನಿಜ, ಮೈಸೂರು ರಾಜ್ಯ 5 ಪ್ರದೇಶಗಳು ವಿಲೀನಗೊಂಡು ರಚಿತವಾದ್ದರಿಂದ, ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ ಸಿನಿಮಾ ಕಾನೂನು ಈಗಿದೆ, ಒಂದೇ ರೀತಿಯ ಶಾಸನವನ್ನು ಅನುಸರಿಸಲು, ಏಕರೂಪವಾದ ನಿಯಮಗಳನ್ನು ಮಾಡುವುದು ಬಹಳ ಒಳ್ಳೆಯದು, ಅದೇ ಉದ್ದೇಶದಿಂದ ಕೂಡಿದ ಈ ಚಿತ್ರಮಂದಿರಗಳಿಗೆ ಸಂಬಂಧಪಟ್ಟ ಮಸೂದೆಯಾಗಿದೆ. ಈ ಉದ್ದೇಶ ಪ್ರಯೋಜನಕಾರಿಯಾಗಬೇಕಾಗಿದ್ದರೆ, ಇದರ ಸಫಲತೆ ಪೂರ್ಣವಾಗಿ ಕೈಗೂಡಬೇಕಾಗಿದ್ದರೆ, ಕ್ಲಾಜುಗಳಲ್ಲಿ ಯಾವ್ಯಾವು ಫಲಕಾರಿಯಾಗುತ್ತವೆ ಮತ್ತು ಚಿತ್ರಮಂದಿರಗಳು ಸುಲಭವಾಗಿ ಸ್ಥಾಪನೆಯಾಗಲು ಸಹಾಯವಾಗುತ್ತವೆಯೋ ಅಂಥವುಗಳನ್ನು ಇವತ್ತು ಅನ್ವಯ ಮಾಡುವುದು ಒಳ್ಳೆಯದು. ಅದರ ಬದಲು ಬರೀ ಕಠಿಣವಾದ ಪ್ರಸಂಗಗಳನ್ನು ಒಡ್ಡಿ ಕಾನೂನನ್ನು ಮಾಡಿದರೆ, ಅದರಿಂದ ಅನುಕೂಲಕ್ಕಿಂತ ಪ್ರತಿಕೂಲವೇ ಆಗುತ್ತದೆ.

ಚಿತ್ರಮಂದಿರಗಳಿಂದ ಜನಸೇವೆ ನಡೆಯಬೇಕು ಚಿತ್ರಮಂದಿರಗಳು, ಸೊಗಸಾಗಿ, ಸುಂದರವಾಗಿ, ಆರೋಗ್ಯಕರವಾಗಿ ಇರಬೇಕು. ಎಲ್ಲೆಲ್ಲಿಯೂ ಸರ್ವಸುಂದರವಾಗಿರತಕ್ಕಂಥ ಚಿತ್ರಮಂದಿರಗಳ ನಿರ್ಮಾಣ ಮಾಡುವ ಹಾಗೆ ಈ ಕಾನೂನಿರಬೇಕು. ಚಿತ್ರಮಂದಿರಗಳಿಗೆ ಯಾವುದೇ ಒಂದು ಉದ್ದೇಶಕ್ಕೆ ಹೋದರೂ ಅದು ಸಫಲವಾಗಲು ಚಿತ್ರಮಂದಿರಗಳು ಎಲ್ಲ ವಿಧದಲ್ಲಿಯೂ ಆಕರ್ಷ

ಣೀಯವಾಗಿರಬೇಕು. ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳುತ್ತಿರುವಂತೆ ಸಿನಿಮಾ ಮಂದಿರ ಸರ್ವಾಂಗ ಸುಂದರಿಯಾಗಿರಬೇಕು. ಆ ಅಂಗ ಯಾವುದು ಅನ್ನುವುದೇ ಪ್ರಶ್ನೆ. ಚಿತ್ರಮಂದಿರಗಳನ್ನು ತಾವು ಈ ರೀತಿ ಬೆಳಸಿಕೊಂಡು ಹೋಗುತ್ತೇವೆ ಅನ್ನತಕ್ಕಂಥ ಈ ಕಾಲದಲ್ಲಿ, ಈ ಅಧುನಿಕ ಪ್ರಪಂಚದಲ್ಲಿ, ಅವುಗಳ ಅವಶ್ಯಕತೆ ದಿನೇ ದಿನೇ ಹೆಚ್ಚಾಗಿ ಬೆಳೆಯುತ್ತಾ ಇದೆ. ಇದಕ್ಕೆ ಕಾರಣ ನಾವು ನೋಡುತ್ತಾ ಇದ್ದೇವೆ. ಚಿತ್ರಮಂದಿರಗಳ ಮುಖಾಂತರ ಎಂಥೆಂಥ ಕೌಶಲ್ಯದಿಂದ ಕೂಡಿದ ಚಿತ್ರಗಳನ್ನು ಪ್ರದರ್ಶನ ಮಾಡುತ್ತಿದ್ದಾರೆಂಬುದನ್ನು ನೋಡಿದ್ದೇವೆ. ಅಂಥ ಒಂದು ಕುಶಲತೆ ಮತ್ತು ಜಾಗರೂಕತೆ ನಮ್ಮ ದೇಶದಲ್ಲಿ ಬೆಳೆಯುತ್ತಾ ಇದೆ. ನಮ್ಮ ಪಕ್ಕದ ರಾಜ್ಯಗಳಾದ ಮದ್ರಾಸು ಮತ್ತು ಬೊಂಬಾಯಿನಲ್ಲಿ ನಿರ್ಮಾಣವಾಗತಕ್ಕಂಥ ಚಿತ್ರಗಳು, ಬೆಂಗಳೂರು, ಮೈಸೂರು ಮತ್ತಿತರ ನಗರಗಳಿಗೇ ಅಲ್ಲದೆ, ಎಲ್ಲಾ ಪ್ರಾಂತ್ಯಗಳಿಗೂ ಬರುತ್ತಾ ಇವೆ. ಅಷ್ಟೇ ಅಲ್ಲ. ನಮ್ಮ ರಾಜ್ಯದಲ್ಲಿರತಕ್ಕಂಥ ನಟನಟಿಯರು ಮದ್ರಾಸಿಗೆ ಬೊಂಬಾಯಿಗೆ ಹೋಗಿ ಅಲ್ಲಿ ಚಿತ್ರಗಳನ್ನು ತೆಗೆದು ತಮ್ಮ ಕಲೆಯನ್ನು ಪ್ರದರ್ಶನ ಮಾಡಬೇಕಾಗಿದೆ. ಅಲ್ಲಿ ಪಿಕ್ಚರುಗಳು ಪ್ರೊಡ್ಯೂಸ್ ಆಗಿ ಮೈಸೂರು ಬೆಂಗಳೂರಿಗೆ ಬರುತ್ತಾ ಇವೆ. ಇದು ನಿಜವಾಗಿ ದುರದೃಷ್ಟಕರ ಪರಿಸ್ಥಿತಿ. ಏಕೆಂದರೆ ಕಲಾವಿದರನ್ನು ನಮ್ಮ ರಾಜ್ಯದಲ್ಲಿಯೇ ಸಾಕಷ್ಟು ಪ್ರೋತ್ಸಾಹ ಮಾಡಿ, ಕಲೆ ಬೆಳೆಯುವುದಕ್ಕೆ ಬೇಕಾದ ಅವಶ್ಯಕತೆಗಳನ್ನು ನಮ್ಮ ಮೈಸೂರು ದೇಶದಲ್ಲಿಯೇ ಮಾಡಿದರೆ ಬಹಳ ಒಳ್ಳೆಯದು. ನಮ್ಮ ಮೈಸೂರು ದೇಶದ ಕಲೆಗಾರರು ಬಹುಶಃ ಮದ್ರಾಸು, ಬೊಂಬಾಯಿನಲ್ಲಿ ಕೂಡ ಖ್ಯಾತಿಗಳಿಸಿದ್ದಾರೆ. ಕನ್ನಡ ಭಾಷೆಯನ್ನೇ ಅಲ್ಲದೆ, ಇತರ ಭಾಷೆಗಳನ್ನೂ ಕಲತು, 2-3 ಭಾಷೆಗಳಲ್ಲಿ ಪ್ರದರ್ಶಿಸುವ ಪ್ರಖ್ಯಾತಿಯನ್ನು, ಹೆಸರನ್ನು ಮೈಸೂರು ದೇಶಕ್ಕೆ ಗಳಿಸಿದ್ದಾರೆ. ಇಂಥ ಕಲೆಗಾರರು ನಮ್ಮ ಮೈಸೂರು ದೇಶದಲ್ಲದ್ದಾರೆ. ಈ ದೃಷ್ಟಿಯಿಂದ ಈ ಮಸೂದೆಯನ್ನು ಮಾಡತಕ್ಕಂಥ ಕಾಲದಲ್ಲಿ, ಮಾನ್ಯ ಸಚಿವರು ತಮ್ಮ ಈ ಒಂದು ಅಧಿಕಾರಾವಧಿಯಲ್ಲಿ, ಸಿನಿಮಾ ಕಲೆಯನ್ನು ಅಭಿವೃದ್ಧಿ ಮಾಡತಕ್ಕಂಥ ಕ್ಷೇತ್ರವನ್ನು ಬೆಂಗಳೂರು ನಗರದಲ್ಲಿ ನಿರ್ಮಾಣ ಮಾಡಲ, ಈ ಸಾಹಸವನ್ನು ಅವು ತಮ್ಮ ಕಾಲದಲ್ಲಿ ಮಾಡಿ, ಈ ಕಲೆಗೆ ಅಭೂತ ಪೂರ್ವ ಉತ್ತೇಜನ ಕೊಟ್ಟರು ಎಂಬ ಕೀರ್ತಿ ತೆಗೆದುಕೊಳ್ಳಲಿ ಎಂದು ಸಭೆಯ ಪರವಾಗಿ ಅವರನ್ನು ಕೇಳಿ ಕೊಳ್ಳುತ್ತೇನೆ.

ಇವೊತ್ತಿನ ದಿವಸ ಈ ಮಸೂದೆಯ ಮುಖಾಂತರವಾಗಿ ಚಿತ್ರಮಂದಿರಗಳಿಗೆ ನಿರ್ಬಂಧವನ್ನು ಹಾಕಬೇಕೆಂದಿದ್ದಾರೆ; ಅದರಲ್ಲಿ ಕೆಲವು ಕಲಮುಗಳು ಎಷ್ಟು ಭೀಕರವಾಗಿವೆ ಎಂದು ಮಾನ್ಯ ಸಚಿವರಲ್ಲಿ ಹೇಳಬೇಕೆಂದಿದ್ದೇನೆ. ಈ ಮಸೂದೆಯಲ್ಲಿ ನಮೂದುಮಾಡಿರತಕ್ಕ ಪ್ರಕಾರವಾಗಿ ಚಿತ್ರಮಂದಿರಗಳನ್ನು ಎಲ್ಲಿ ಯಾರು ಸ್ಥಾಪನೆ ಮಾಡಬೇಕಾದರೂ ಕೂಡ ಲೈಸೆನ್ಸ್ ಹೊಂದಬೇಕಾಗಿದೆ. ಅದು ಕಡ್ಡಾಯವಾದುದು. ಇಂಥಾ ಕಡ್ಡಾಯವಾದ ವಿಧಿಯನ್ನು ಇಲ್ಲಿ ಹಾಕಿದ್ದಾರೆ. ಈ ರೀತಿ ಕಡ್ಡಾಯ ಮಾಡುವಾಗ ಲೈಸೆನ್ಸ್ ಕೊಡತಕ್ಕವರು ಜಿಲ್ಲಾಧಿಕಾರಿಗಳು. The licensing authority shall be the District Magistrate. ಎಲ್ಲಿಯೇ ಚಿತ್ರಮಂದಿರವಿರಲ, ಯಾರೇ ಚಿತ್ರಮಂದಿರವನ್ನು ನಡೆಸುವುದಕೆ ಪ್ರಯತ್ನಪಡಲಿ ಅವರಿಗೆ ಅನುಮತಿಯನ್ನು ಕೊಡತಕ್ಕ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಎಂದು ನಮೂದು ಮಾಡಿದ್ದಾರೆ. ಹಳ್ಳಿಗಳಲ್ಲಿ ಯಾವುದಾದರೂ ಒಂದು ಚಿತ್ರವನ್ನು ಪ್ರದರ್ಶನ ಮಾಡಬೇಕು ಎಂದರೆ ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ಅವರಿಂದಲೇ ಅನುಮತಿಯನ್ನು ಪಡೆಯಬೇಕು ಎಂದರೆ ಕಷ್ಟ ಸಾಧ್ಯವಾದ ಕೆಲಸವಾಗುತ್ತದೆ. ಜಿಲ್ಲಾ ಅಧಿಕಾರಿಗಳು ಯಾರಿಗೆ ತಮ್ಮ ಅಧಿಕಾರವನ್ನು ಈ ಸಂದರ್ಭದಲ್ಲಿ delegate ಮಾಡಬಹುದು ಎಂಬುದನ್ನು ಹೇಳಿಲ್ಲ. ಹಳ್ಳಿಗಳಲ್ಲಿ ಒಂದು ಚಿತ್ರವನ್ನು ಪ್ರದರ್ಶನ ಮಾಡಬೇಕಾದರೆ ಜಿಲ್ಲಾ ಕೇಂದ್ರಕ್ಕೆ ಹೋಗಬೇಕು ಎಂದರೆ ಕಾಲದ ನಷ್ಟ, ಹಣದ ನಷ್ಟ, ಆಗುತ್ತದೆ. ಈ ಕಾನೂನನ್ನು ಮಾಡತಕ್ಕ ಕಾಲದಲ್ಲಿ ಕೇವಲ ಪಟ್ಟಣಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿರುವಂತೆ ಕಾಣುತ್ತದೆ. ಇದು ಹಳ್ಳಿಗಳಲ್ಲಿ ಚಿತ್ರ ಪ್ರದರ್ಶನಮಾಡುವವರಿಗೆ ಆಶಾಭಂಗವಾಗುವ ಹಾಗೆ ಇದೆ.

ಒಂದು ಕಟ್ಟಡವನ್ನು ಕಟ್ಟಿ ಶಾಶ್ವತವಾಗಿ ಚಿತ್ರವನ್ನು ನಡೆಸತಕ್ಕದ್ದು ಒಂದು ವಿಧಾನ, ಇನ್ನೊಂದು touring talkies. ಸಣ್ಣ ಪುಟ್ಟ ಹಳ್ಳಿಗಳಿಗೆ ಹೋಗಿ ಚಿತ್ರಗಳನ್ನು ಪ್ರದರ್ಶನ ಮಾಡುವುದಕ್ಕೆ ಒಂದು ಅವಕಾಶವಿದೆ. ಆದರೆ ಈ touring talkies ಅಷ್ಟು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಇವುಗಳಲ್ಲಿ ಹರಿದ ಡೇರ, ಮುರುಕಲು ಕುರ್ಚಿಗಳನ್ನು ಇಟ್ಟುಕೊಂಡಿರುತ್ತಾರೆ. ಆಧುನಿಕ ರೀತಿಯಲ್ಲಿ, ಚಿತ್ರವನ್ನು ನೋಡಲು ಹೋಗುವವರಿಗೆ, ಒಂದು ಸೌಕರ್ಯವನ್ನು ಮಾಡಿಕೊಡಬೇಕಾದ್ದು ಮುಖ್ಯ, ಟೂರಿಂಗ್ ಟಾಕೀಸ್ ನಡೆಸುವವರೂ ಕಲ್ಪನೆ ಮಾಡಿಕೊಳ್ಳಬೇಕು. ಈ ಸೌಲಭಗಳು ಇವೊತ್ತು ಚಿತ್ರಮಂದಿರಗಳಿಗೆ ಹೋಗುವವರಿಗೆ ದೊರೆಯಬೇಕು ಮತ್ತು ಚಿತ್ರವನ್ನು ನೋಡಿ ಬಂದರೆ, ಅವರಿಗೆ ಮನಸ್ಸಿನಲ್ಲಿ ಸಂತೋಷವುಂಟಾಗಬೇಕು. ಶಾಂತಿಯುಂಟಾಗಬೇಕು. ಇಂಥ ಒಳ್ಳೆಯ ಅವಕಾಶಗಳನ್ನು ಟೂರಿಂಗ್ ಟಾಕೀಸ್ ಕಲ್ಪಿಸಿಕೊಡಬೇಕು. ಜಿಲ್ಲಾಧಿಕಾರಿಗಳು, ಸಣ್ಣಪುಟ್ಟ ಊರುಗಳಲ್ಲಿ ಪ್ರದರ್ಶನಮಾಡತಕ್ಕವರ ಅನುಕೂಲಕ್ಕಾಗಿ ಲೈಸೆನ್ಸ್ ಕೊಡುವ ಅಧಿಕಾರ

(MR. SPEAKER)

ವನ್ನು ಬೇರೆಯವರಿಗೆ delegate ಮಾಡಲು ಒಂದು ಅವಕಾಶವನ್ನು ಈ ಕಾನೂನಿನಲ್ಲಿ ಮಾಡಿಕೊಡ ಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಕ್ಲಾಜ್ 5(2) ರಲ್ಲಿ ಲೈಸೆನ್ಸ್ ಕೊಡತಕ್ಕದ್ದರಲ್ಲಿ ಹೀಗೆ ಹೇಳಿದ್ದಾರೆ:

"The licensing authority may, thereupon, after consulting such authority or officer as may be prescribed and subject to the provisions of this Act, and the rules made thereunder, grant the license to such person and on such terms and conditions and subject to such restrictions as it may determine."

It is very vague. ಯಾವ authority, ಯಾವ person, ಯಾವ terms, ಯಾವ restrictions, ಎನ್ನುವುದನ್ನು ನಿಗದಿಯಾಗಿ, ಕರಾರುವಾಕ್ಕಾಗಿ ಈ ಕಾನೂನಿನಲ್ಲಿಯೇ ಸೇರಿಸ ಬೇಕು. ಈಗಿರುವಂತೆಯೇ ಇದ್ದರೆ unlimited power ಕೊಟ್ಟ ಹಾಗೆ ಆಗುತ್ತದೆ.

ಕ್ಲಾಜ್ 5(3) ರಲ್ಲಿ—

"Where the licensing authority refuses to grant the license, it shall do so by an order communicated to the applicant, giving reasons for such refusal."

ಎಂದು ಹೇಳಿದ್ದಾರೆ. ಲೈಸೆನ್ಸ್ ಕೊಡುವುದಕ್ಕೆ ನಿರಾಕರಿಸಬಹುದು. ಆದರೆ ಆ ರೀತಿ ಲೈಸೆನ್ಸ್ ನಿರಾಕರಿಸಲ್ಪಟ್ಟ ಮನುಷ್ಯ ಯಾರಲ್ಲಿ ಅಪೀಲುಮಾಡಿಕೊಳ್ಳಬೇಕು ಪರಿಹಾರವನ್ನು ಎಲ್ಲಿ ದೊರಕಿಸಿ ಕೊಳ್ಳಬೇಕು ಎನ್ನುವುದನ್ನು ಇದರಲ್ಲ ನಮೂದು ಮಾಡಿಲ್ಲ. ಅದಕ್ಕೆ ಇದರಲ್ಲಿ ಅವಕಾಶವಿಲ್ಲ. ಕ್ಲಾಜು 4 ಮತ್ತು 8—ಇವುಗಳ ಸಂಬಂಧದಲ್ಲಿ ಮಾತ್ರ ಅಪೀಲು ಹೋಗಲು ಅವಕಾಶವಿದೆ. ಆದರೆ ಐದನೆಯ ಕ್ಲಾಜ್ ಪ್ರಕಾರ licensing authority ಲೈಸೆನ್ಸ್ ಕೇಳಿದಂಥ ವ್ಯಕ್ತಿಗೆ ಲೈಸೆನ್ಸ್ ಕೊಡಲಿಲ್ಲವೆಂದರೆ ಅಂಥ ವ್ಯಕ್ತಿ ಅಪೀಲು ಹೋಗತಕ್ಕ ಅವಕಾಶವನ್ನು ಈ ಮಸೂದೆಯಲ್ಲಿ ಖಂಡಿತವಾಗಿಯೂ ಕೊಡಬೇಕು. ಇಲ್ಲದೆ ಹೋದರೆ ಆ ವ್ಯಕ್ತಿಗೆ ಬಹಳ ತೊಂದರೆಯಾಗುತ್ತದೆ. ಇದು ಬಹಳ ಮುಖ್ಯವಾದ ವಿಷಯ. ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಇದನ್ನು ಪರೀಕ್ಷೆಮಾಡ ಬೇಕೆಂದು ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ.

ಲೈಸೆನ್ಸ್ ತೆಗೆದುಕೊಂಡು ಸಿನಿಮಾ ನಡೆಸುತ್ತಿದ್ದರೂ ಅದನ್ನು ಯಾವಾಗ ಬೇಕಾದರೂ ಸಸ್ಪೆಂಡ್ ಮಾಡುವುದಕ್ಕೆ ಇದರಲ್ಲಿ ಅಧಿಕಾರವಿದೆ. ಇದು ಬಹಳ ಕ್ರೂರವಾಗಿದೆ. ಸಿನಿಮಾಗಳನ್ನು ಯಾವುದೇ ಊರಿನಲ್ಲಿ, ಯಾವುದೇ ಪಟ್ಟಣದಲ್ಲಿ ನಡೆಸುತ್ತಿರುವ ಕಾಲದಲ್ಲಿ, ಆ ಊರಿನಲ್ಲಿ ಪಾರ್ಟಿ ವೈಷಮ್ಯಗಳಿದ್ದರೆ, ಕ್ಲಾಜ್ 14ರ ಪ್ರಕಾರ ಯಾವುದೇ ಕಾಲದಲ್ಲಿ ಅವರ ಲೈಸೆನ್ಸನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಅದನ್ನು ರದ್ದುಮಾಡುವುದಕ್ಕೆ ಒಂದು ಅಧಿಕಾರವನ್ನು ಕೊಟ್ಟಿದ್ದಾರೆ. ಈ ಅಧಿಕಾರವನ್ನು ಕೊಟ್ಟಿರುವುದರಲ್ಲಿ ಹೀಗೆ ಹೇಳಿದ್ದಾರೆ.

14 (i) "if it is of opinion that any film, which is being or is about to be publicly exhibited is likely to cause a breach of the peace, or

(ii) for any other sufficient reason,"

ಯಾವುದೇ ಸ್ಥಳದಲ್ಲಿ ಇನ್ನೂ ಸಿನಿಮಾ ಪ್ರದರ್ಶನವಾಗದೆ ಇರುವಾಗ, ಮುಂದೆ ಪ್ರದರ್ಶವಾಗ ಬಹುದು ಎಂದು ಇರುವಾಗ breach of peace ಆಗುತ್ತದೆಂದರೆ, ಅವರ ಲೈಸೆನ್ಸ್ ರದ್ದು ಮಾಡ ಬಹುದು ಎಂದು ಹೇಳಿದ್ದಾರೆ. ಇನ್ನೂ ಹೀಗೆಯೇ ಅನೇಕವಾದ ಕಾರಣಗಳನ್ನು ಕೊಟ್ಟಿದ್ದಾರೆ. ಈ ಕಾರಣಗಳನ್ನು ಕೊಡತಕ್ಕ ರೀತಿಯಲ್ಲಿ ಇಂಥಾ ಕಾರಣಗಳಿಗೋಸ್ಕರವಾಗಿ, ನಿಖರವಾಗಿ ಇಂಥದ್ದ ರಿಂದ ತೊಂದರೆಯಾಗುತ್ತದೆಂದು ನಮೂದಿಸಿದರೆ ಒಪ್ಪಿಕೊಳ್ಳಬಹುದು. ಕೇವಲ ಅನುಮಾನ ಬಂದರೆ, ನೆಮ್ಮದಿಗೆ ಭಂಗವಾಗುತ್ತದೆ, ಸಿನಿಮಾ ನಡೆಸುವುದರಿಂದ ಅಲ್ಲಿ ಜಗಳವಾಗಬಹುದು ಎಂದು ಸ್ಥಳೀಯ ರಾಜಕೀಯದಿಂದ, ಸ್ಥಳದ ಜಗಳಗಳಿಂದ, ಸಿನಿಮಾ ನಡೆಸುವವನು ಒಂದು ಪಾರ್ಟಿಯ ಕಡೆ ಇದ್ದಾನೆಂದು ಸಿನಿಮಾ ನಿಲ್ಲಿಸಬೇಕು ಎನ್ನುವ ಕಾರಣದಿಂದ, ಯಾವಾಗ ಬೇಕಾದರೂ ಡೆಪ್ಯುಟಿ ಕಮಿಷನರಿಗೆ ಒಂದು ಅರ್ಜಿ ಹಾಕಿ, ಸಿನಿಮಾ ಇಲ್ಲಿದ್ದರೆ ತೊಂದರೆಯಾಗುತ್ತದೆಂದು, ಗಲಭೆಯಾಗು

ತ್ತದೆಂದು ಅದನ್ನು ನಿಲ್ಲಿಸುವುದಕ್ಕೆ ಅವಕಾಶವಿದೆ. ಇದು ಸರಿಯಾಗಿಲ್ಲ. ಈ ಕ್ಲಾಜು ಬಹಳ liberal ಆಗಿ ಇರಬೇಕು. ಚಿತ್ರಮಂದಿರಗಳನ್ನು ನಡೆಸುವವರಿಗೆ ರಕ್ಷಣೆ ಬೇಕು. ಉಗ್ರವಾದ ನಿಬಂಧನೆಗಳೇನಿವೆ ಅವುಗಳನ್ನೂ liberalise ಮಾಡಿದರೆ, ಊರಿನಲ್ಲಿರತಕ್ಕ, ಸ್ಥಳದ ರಾಜಕೀಯದಿಂದ ಒಬ್ಬರೊಬ್ಬರು ಜಗಳವಾಡಿದರೆ, ಅದರ ಪೀಡನ್ನು ತೀರಿಸಿಕೊಳ್ಳುವ ಮನೋವ್ಯಕ್ತಿಗೆ ಅವಕಾಶ ಕೊಟ್ಟಹಾಗೆ ಆಗುತ್ತದೆ. ಇದನ್ನು ಖಂಡಿತವಾಗಿಯೂ ಸಾಕಾದಷ್ಟು ಕಡಮೆ ಮಾಡಬೇಕು. ಇಲ್ಲದೆ ಇದ್ದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದರಲ್ಲಿರುವ ನಿಯಮಗಳನ್ನು ಆದಷ್ಟೂ ಸಡಿಲಗೊಳಿಸಬೇಕು.

ಕ್ಲಾಜ್ 15ರಲ್ಲಿ penalties ವಿಷಯವನ್ನು ಹೇಳಿದ್ದಾರೆ. ಇದರ ಪ್ರಕಾರ ಸಿನಿಮಾ ನಡೆಸತಕ್ಕ ವನು ತಪ್ಪು ಮಾಡಿದರೆ ಅವನ ಲೈಸೆನ್ಸ್ ರದ್ದುಮಾಡಿ ಅವನಿಗೆ ಶಿಕ್ಷೆ ಮಾಡಬಹುದೆಂದಿದೆ. ಆದರೆ ಸಿನಿಮಾ ನಡೆಸತಕ್ಕ ಜಾಗ ಯಾವುದಾದರೂ ಖಾಲಿ ಜಾಗದಲ್ಲಿ ಒಬ್ಬನು ಸಿನಿಮಾ ನಡೆಸುತ್ತಿದ್ದರೆ, ಆ ಸ್ಥಳದ ಮಾಲೀಕನಿಗೂ ಶಿಕ್ಷೆಯಾಗುತ್ತದೆ. ಅದೂ ಗುರುತರವಾದ ಶಿಕ್ಷೆಯಾಗುತ್ತದೆ. ಮೊದಲು ಒಂದು ಸಾವಿರ ರೂಪಾಯಿವರೆಗೂ ಜುಲ್ಮಾನೆ ಹಾಕಬಹುದು ಮತ್ತು ಮುಂದುವರೆಯುವ ತಪ್ಪಿಗೆ "........in the case of a continuing offence, with a further fine, which may extend to one hundred rupees for each day during which the offence continues" ಎಂದು ಇದೆ.

ಇಂಥ ಸಿನಮಾ ನಡೆಸಲು ಜಾಗಕೊಟ್ಟಿರತಕ್ಕ ಮಾಲೀಕನಿಗೂ ಶಿಕ್ಷೆ, ದಂಡ ಹಾಕಬೇಕಾಗು ವುದು ಎಂದು ಇದರಲ್ಲಿದೆ. ಒಂದು ಖಾಲಿ ಸೈಟು ಇರಬಹುದು. ಯಾರೋ ಬಂದು ಒಂದು ಟೆಂಟು ಹಾಕಿ ಸಿನಿಮಾ ನಡೆಸಿದರೆ ಸೈಟ್ ಮಾಲಿಕನಿಗೂ ಶಿಕ್ಷೆ ಕೊಡಬೇಕೆಂದು ಹೇಳುವುದು ಬಹಳ ಕ್ರೂರ ವಿಧಿಯಾಗಿದೆ. ಮಸೂದೆಯಿಂದ ಇಂಥ ಕ್ರೂರ ವಿಧಿಯನ್ನು ತೆಗೆಯಬೇಕಾಗುತ್ತದೆ. ಇದನ್ನು ಸೂಕ್ತ ಬದಲಾವಣೆ ಮಾಡಬೇಕು ಎಂದು ನಾನು ಸೂಚಿಸುತ್ತೇನೆ.

ಇನ್ನು ಸಿನಿಮಾ ಲೈಸೆನ್ಸ್ ಕೊಡುವ ಅಧಿಕಾರ ಜಿಲ್ಲಾ ಮಾಜಿಸ್ಟ್ರೇಟ್ ಅವರಿಗೆ ಕೊಟ್ಟಿದೆ. ಆದರೆ 19ನೆಯ ಕಲಮಿನಲ್ಲಿ ಈ ರೀತಿ ಇದೆ. :—

> "The State Government may, if it is necessary or expedient in public interest so to do, by order in writing and subject to such conditions and restrictions as may be specified in the order, exempt any cinematograph exhibition or class of cinematograph exhibitions or any place where a cinematograph exhibition is given from any of the provisions of this Act or of any rules made thereunder."

ಸರಕಾರ ಎಗ್ಜೆಂಪ್ಟ್ ಮಾಡಿ ಎಲ್ಲಿ ಬೇಕಾದರೂ ಲೈಸೆನ್ಸ್ ಕೊಡಬಹುದು ಎಂದು ಅಧಿಕಾರ ಇಟ್ಟು ಕೊಂಡಿದ್ದಾರೆ. ಇದು ಬಹಳ ಅಪಾಯಕರ. ಯಾರಾದರೂ ನೇರವಾಗಿ ಮಂತ್ರಿಗಳ ಕಡೆ ಹೋಗಿ ಲೈಸೆನ್ಸ್ ಪಡೆಯುವುದು ಅಪಾಯಕರ ಎಂದು ಹೇಳಬೇಕಾಗುತ್ತದೆ. ನಿಮಗೆ ಬೇಕಾದವರು ನೇರ ವಾಗಿ ಬಂದು ಲೈಸೆನ್ಸ್ ಕೊಡಿ ಎಂದು ಕೇಳಲು ಒಂದು ಅವಕಾಶ ಕಲ್ಪನೆ ಮಾಡಿಕೊಂಡಿದ್ದೀರಿ. ಜಿಲ್ಲಾಧಿಕಾರಿಗಳನ್ನು ಬಿಟ್ಟು ನಿಮ್ಮ ಕಡೆ ಬರುವಹಾಗೆ ಮಾಡಿಕೊಂಡಿರುವುದು ತೊಂದರೆ ಉಂಟು ಮಾಡುತ್ತದೆ. ನೀವೇ ಇದನ್ನು ಕಲ್ಪಿಸಿಕೊಂಡಿರುವುದು ಬಹಳ ಅಪಾಯಕರ ಎಂದು ನಾನು ತಿಳಿದು ಕೊಂಡಿದ್ದೇನೆ. ಈ 19ನೆಯ ಸೆಕ್ಷನನ್ನು ಸಾಕಷ್ಟು ಸೂಕ್ತವಾದ ರೀತಿಯಲ್ಲಿ ಸುಧಾರಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಇವೊತ್ತಿನ ದಿವಸ ಚಿತ್ರ ಮಂದಿರಗಳನ್ನು ಸ್ಥಾಪನೆ ಮಾಡಲು ಅನೇಕ ಎರಡು ತೊಡರು ಗಳನ್ನು ಉಂಟು ಮಾಡುವ ಅನೇಕ ಕಲಮುಗಳು ಈ ಮಸೂದೆಯಲ್ಲಿ ಇವೆ. ಸುಂದರವಾಗಿ ಚಿತ್ರ ಮಂದಿರಗಳು ಬೆಳೆಯಬೇಕು, ಒಳ್ಳೇ ಚಿತ್ರ ಪ್ರದರ್ಶನ ಮಾಡಬೇಕು ಎಂದು ಹೇಳತಕ್ಕಂಥ ಕಾಲದಲ್ಲಿ ಹೆಚ್ಚಿನ ನಿರ್ಬಂಧ ಹಾಕುವುದರಿಂದ ಉದ್ದೇಶ ಸಫಲವಾಗುವುದಿಲ್ಲ. ಆದುದರಿಂದ ಸೂಕ್ತ ತಿದ್ದುಪಡಿ ತಂದು ಈ ವಿಧೇಯಕವನ್ನು ಬದಲಾವಣೆ ಮಾಡುವುದು ಅಗತ್ಯ. ಚಿತ್ರ ಮಂದಿರಗಳು ಸುವ್ಯವಸ್ಥಿ ತವಾಗಿ ನಡೆಯಬೇಕೆಂಬ ದೃಷ್ಟಿಯಿಂದ ಕೆಲವು ಕಲಮುಗಳನ್ನು ಸುಧಾರಿಸಬೇಕು ಮತ್ತು ಚಿತ್ರ ಪ್ರದರ್ಶನ ವ್ಯವಸ್ಥಿತವಾದ ರೀತಿಯಲ್ಲಿ ಬೆಳೆಯುವಹಾಗೆ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri A. P. APPANNA (Virajpet).—Sir, while lending my support to this Bill, I would like to make a few observations regarding the provisions of the Bill. Even though similar provisions have been in force in various parts of the State, from experience it has been found that the Cinema Houses are not maintained according to the conditions that are being laid down in the license. There must be sufficient provision to make periodical inspections and the inspecting authorities must periodically submit reports to the District Magistrate, who has got authority to suspend the license. Under Clause 11, the State Government has got the authority to issue directions regarding the exhibition of certain scientific and educational films. In recent times, we have found that in all the Cinema Theatres the State Government has directed the concerned people to play the National Anthem at the end of the show. But, this direction is not being followed in many of the Theatres and even if it is played, the people who are there get away before it is completed.

Sri C. J. MUCKANNAPPA (Sira).—By making this law, how are you going to force the people ?

Sri A. P. APPANNA.—It must be seen that every Cinema exhibitor must adhere to this direction and there should not be any contravention of this direction. When every Cinema exhibitor is directed to play the National Anthem at the end of the show, if some of the exhibitors do and some never play the National Anthem, then it goes to show that the authorities concerned are not enforcing those directions. Also, when such directions are issued, certain instructions must also be given not to allow the audience to go out before the National Anthem is played in the House. In clause 6 (b), it is found that while sanctioning license, the status and previous experience of the applicant must be taken into consideration. It has been found that while issuing licenses much importance is given to this particular item and it leads to the monopoly of this business. When status and previous experience are taken into account, if a person who is owning several theatres applies for a license and a person who is just entering the business also applies for a license, naturally the person who is owning theatres must be given license under this provision because he has got previous experience. That is what is happening in the case of Motor vehicles also. A person who is having a number of Buses gets more routes because of previous experience. In the same way, as per the provision under clause 6 (b), status and previous experience will be taken into account and the person already owning a theatre will be adding one more to his business. That will lead to the monopoly of business and a new entrant will have no place in this.

Sir, regarding the penalties, the Hon'ble the Leader of the Opposition stated that the owner of the site, who has leased his site for the exhibitor, should not be penalised for the omissions and commissions of the exhibitor. In Clause 15, it is stated as follows :

> "If the owner or person in charge of a cinematograph uses the same or allows it to be used, or if the owner or occupier of any place permits or suffers that place to be used,..."

When the owner of a site merely leases it, it is up to the exhibitor to get a license by fulfilling those conditions. The exhibitor, therefore, must be made liable for violating the conditions that are laid down in the license. By making the owner of a site liable, I feel, we will be putting him to hardship. He only leases it and it is the exhibitor who applies for and gets a license.

Then, in clause 19, the State Government has taken power to exempt any exhibition from these provisions. I do not know Sir, under what circumstances such exemptions are necessary. It is provided in clause 11 that the State Government has got the power to direct the cinema exhibitor to exhibit educational, scientific, films and also documentary films. I do not know whether such an occasion arises. It may lead to misuse of power to a certain extent.

2-00 P.M.

Then I feel Sir, that this power to exempt exhibition from any of the provisions of this Bill should not be completely given to the Government. Then it is also better, Sir, regarding the appeal that may be Referred against the orders issued by the licencing authority, as stated in this Bill, the period of limitation for the appeal and the appellate authority must be specifically mentioned in the Bill itself, instead of providing it in the rules. I want to say once again that these things, *i.e.*, the time within which appeals must be filed and the authority to which appeals must be prefered, should be mentioned in the Bill itself. These are my observations on the Bill.

Sri B. R. SUNTHANKAR (Belgaum City).— Madam, This is not a new measure, because similar legislation, similar Acts were existing in the various parts of the State. So, as explained by the Hon'ble Minister, this Bill has been a sort of combination of the various Acts prepavailing in the State. We have seen working of this legislation for a number of years in the different areas. From the experience of working of these various Acts, we have seen that the Government is looking only to its own interests—looking to the interest of administration and the administrative convenience of the Government and the Government has not bestowed much attention on the interest of the public. I may say, that in regard to cinema theatres, Government has been rather indifferent to the interests of the public.

[MR. SPEAKER in the Chair]

Cinema Houses are very popular and growing more and more popular among the people. Cinema-going has become a habit with the people because it affords cheap entertainment which is ready at hand and the duration of the entertainment is also very convenient. Particularly the lower income groups are the real patrons of the cinemas. Surveys that have been carried out in respect of cinemas and cinema houses, have revealed that 66 per cent of the patrons of cinemas are drawn from the lower income groups. These surveys clearly reveal that cinema-going is more popular among the lower income groups. Sir, while

(Sri B. R. Sunthankar)

considering this Bill, we must take note of the ameneties and conveniences and facilities that are provided to these cinema-goers. Sir, if we look at the cinema theatres that are prevalent everywhere, if we look to the conditions of these cinema Houses, we find that the conditions there are not good, are not happy. This Bill also lacks in that aspect. No provisions from the point of view of the public are there in this Bill,

Sir, first I will take the example of the seating arrangement in the cinema theatres. There are no specifications mentioned in this Bill or in the existing Acts also about the seating accommodation, arrangements, particularly the distance between the screen and the front row of seats. There are no specifications or any regulations or rules regarding the distance between the rows of seats, between seats in the same row. Sir, in the present cinema houses, various distance are maintained. In some theatres, the front rows are very near to the screen–That is very injurious to the eye sight. That should not be allowed. Some minimum distance between the screen and the front seats must be prescribed to save the injurey to the eye-sight of the cinema-goers. Sir, some minimum specifications of space should be laid down and should be enforced.

Then Sir, about the sanitary arrangements. Clause 10 is there, about the construction or reconstruction of buildings and cinema houses. There is no mention about sanitary arrangement or water facilities. If we look to the present cinema theatres, we find some of them are very dirty and insanitary conditions prevail in them. The urinals are not kept clean. The stinking smell of the urinals pervades the entire theatre. Government have not cared to inspect such places and take necessary steps.

Similary, every cinema house must be provided with adequate water facilities. It should be specifically mentioned that these buildings should be provided with the necessary sanitary facilities.

Mr. SPEAKER —Under the rules or under the Act?

Sri B. R. SUNTHANKAR.—Under the Act. We find in Bangalore that taps and basins are there but they are without water. Government should enforce these rules and see that every cinema house is provided with adequate water facilities.

While granting license particularly to the new cinemas, all the necessary precautions should be taken. We find that such necessary precautions are not taken. Clause 6 prescribes the terms and conditions of granting licence. Mention is made there about the suitability of the place where cinematograph exhibitions are proposed to be given. In determining the suitability, we find that public interests are not taken into consideration. I can give an example from my own city. A licence to a cinema house was granted in a very congested locality. The residents of that locality protested, and sent representaion requesting Government not to give them licence because in that locality a cinema house would have been a great nuisance to the residents; but the

representations of the residents of the locality were turned down and the proprietor of the cinema house brought influence to bear on the Government through Congress man and got the licence. This theatre is in a conjested area and is causing great nuisance to the locality. It is stated in clause 6 that the licensing authority, "shall also take into consideration any representations made by persons already giving cinematograph exhibitions in or near the proposed locality or by any local authority or police authority within whose jurisdiction the place proposed to be licensed is situated or by any association interested in the giving of cinematograph exhibition." That means interested parties only are allowed to make representations and their representations are taken into consideration. But what about the public ? Representation from the public also should be taken into consideration; the sentiments or the requirements or the desire of the public in the locality should also be taken into consideration.

Sri R. M. PATIL.—Exhibition is also a business. The businessman does take care of himself. As regards the sentiments or the environments or the circumstances, the likes and dislikes—all these will be taken into consideration by the businessman in order to see that his business thrives.

Sri B. R. SUNTHANKAR.-When once license is given people become helpless. I am telling it from the experience of my own city. When you give the licence, the people are helpless. In a conjested locality a new cinema house is a great nuisance from all points of view. While determining the suitability of the place, the convenience of the people in that locality will have to be taken into consideration.

About the inadequacy or limiting the number of cinema houses, how this inadequacy will be determined is not clear. That will depend upon the sweet will of the licensing authority. Some terms, conditions or specifications should be mentioned. Generally, the adequacy should be determined by the population.

Sri R. M. PATIL.—It is already there. Perhaps you don't know that.

Sri B. R. SUNTHANKAR.—Along with that consideration, there is another consideration. There are more cinema-goers particularly in labour areas or in the locality of lower income groups and hence, in such areas there is need for more cinema theatres. About aedquacy and suitability, I would like to make one suggestion to the Government; but this does not relate to this Bill particularly. I may suggest that when town planning is carried out, suitable sites for cinema houses should be provided in the plan itself, because town planning activities are going on and taken up seriously. While we plan in the new town planning, schemes for suitable for sites should be provided for cinemas.

There is one matter which I have to mention. At times the licensing authority is found to misuse his powers; at times he unnecessarily interferes in the affairs of cinema houses. I may quote the example of my own city. Recently the people of Belgaum observed hartal on a particular day as a protest against the burning of the effigy of Sri N. V.

(SRI B. R. SUNTHANKAR)

Gadgil at Bangalore. On that day, all the cinema houses also were closed. When the proprietors of the cinema houses declared on the previous day that there would be no cinema shows next day, the District Magistrate tried to exent pressure on the proprietors not to close the cinema houses.

Mr. SPEAKER.—So, what is the provision that the member wants in this Bill ?

Sri B. R. SUNTHANKAR.—uch undue pressure should not be brought to bear on the cinema proprietors. I am speaking from the experience in our area. The authorities should not take sides. That is what we want.

About touring talkies, there is no specific provision for the touring talkies. The tents of these touring talkies would be in a very bad condition. So, there should be some specific provision for them also.

Sri R. M. PATIL.—You want to describe such things in the Act.

Sri B. R. SUNTHANKAR.—That should be described in the rules. In clause 5 it is said that the Licencing Athority may grant a licence to such person and on certain terms and conditions, etc,. So, it all depends on the sweet will of the Licencing Authority. What are the terms and conditions ? There should be some guiding principles. It should not be left to the sweet will of the Licencing Authority. If it is not already there in the Rules, it may be provided.

Then clause 11 is about documentaries. A specific mention should be made about defence purposes, specially so in times of emergency.

Mr. SPEAKER.—Does he think that defence emergeney would be a permanent one ?

Sri B. R. SUNTHANKAR.—Sir, we must be prepared for ever for defence. So, I want that it should be specifically mentioned. In clause 14 (2) it is said: '... for any other sufficient reasons.' Sir, this is very vauge and wide. What are those sufficient reasons? That again depends simply on the sweet will and whims of the Licencing Authority and the State Government. I would like this to be modified. Then in sub-clause (5) the period mentained is only two weeks; in the original Act it was two months. I do not know why it was chaged to two weeks. Two weeks would be a very short time and it must be made two months. With these observations and hoping that the Joint Select Committee would improve on this Bill, I conclude, Sir.

Election to the Committee on Private Members' Bills and Resolutions

Mr. SPEAKER.—Now, I have to announce to the House the following:

In connection with the election to the Committee on Private Members' Bills and Resolutions, as the number of candidates is equal to the number of seats to be filled, the following members are declared elected and consequently there will be no ballot in this behalf :

Sriyuts—

1 B. Basavaiah
2 Ganji Veerappa
3 S. M. Guraddi
4 H. R. Keshava Murthy
5 T. Madaiah Gowda
6 Y. Manjaya Shetty
7 E. Narayana Gowda
8 S. Rajagopal
9 Sanjeevanath Aikala
10 Siddaiah Kashimath

Under sub-rule (1) of Rule 267-A of the Rules of Procedure and Conduct of Business in the Mysore Legislative Assembly, the Deputy Speaker shall be the Chairman of the Committee.

MYSORE CINEMAS (REGULATION) BILLS 1962.

Motion to consider—(contd)

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಈ ಸಭೆಯ ಮುಂದೆ ಇಟ್ಟಿರತಕ್ಕ 1962ನೆಯ ಇಸವಿಯ ಮೈಸೂರು ಚಲನಚಿತ್ರ (ವಿನಿಯಮನ) ವಿಧೇಯಕವನ್ನು ನಾನು ಸ್ವಾಗತಿಸಿ ಸಮರ್ಥಿಸುತ್ತೇನೆ. ಈ ವಿಧೇಯಕವು ಬಹಳ ಅನುಕೂಲವಾಗಿದೆ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಚಲನ ಚಿತ್ರಗಳು ನಮಗೆ ವಿದ್ಯಾಭ್ಯಾಸಕ್ಕೆ ಒಂದು ದೊಡ್ಡ ಸಾಧನೆಯಾಗುತ್ತವೆ ಎಂದು ನಾನು ತಿಳಿದುಕೊಂಡಿದ್ದೇನೆ. ಚಲನ ಚಿತ್ರದ ಮೂಲಕ ವಿಜ್ಞಾನದ ವಿಷಯಗಳನ್ನು, ವಿದ್ಯಾಭ್ಯಾಸದ ವಿಷಯಗಳನ್ನು, ತಾಂತ್ರಿಕ ವಿಷಯಗಳನ್ನು ದೇಶದ ಚರಿತ್ರೆಯ ವಿಷಯಗಳನ್ನು, ನೀತಿಯ ವಿಷಯಗಳನ್ನು ಬಹಳ ಸ್ಪಷ್ಟವಾಗಿ ಅಕ್ಷರಸ್ಥರಲ್ಲದವರಿಗೆ ತಿಳಿಸಬಹುದು ಎಂದು ನಾನು ನಂಬುತ್ತೇನೆ. ಅಲ್ಲದೆ ಅನೇಕ ಸುದ್ದಿಗಳನ್ನು ಎಂದರೆ ಪ್ರಚಲಿತವಾಗಿರತಕ್ಕ ಸುದ್ದಿಗಳನ್ನು ಚಿತ್ರಗಳ ಮೂಲಕ ಜನಗಳಿಗೆ ತಿಳಿಯುವ ಹಾಗೆ ಚೆನ್ನಾಗಿ ಸಪಾ-ಡು ಮಾಡಬಹುದು. ನಾವೆಲ್ಲಾ ಈಗ ಸಾಕ್ಷ್ಯ ಚಿತ್ರಗಳನ್ನು ನೋಡುತ್ತಿದ್ದೇವೆ. ಹಿಂದೆ ನಡೆದ ಕೆಲಸ, ಮತ್ತು ರಾಜಕೀಯ ವಿಷಯಗಳನ್ನು ಚಿತ್ರಗಳ ಮೂಲಕ ತೋರಿಸಿ ಜನಗಳಿಗೆ ತಿಳಿವಳಿಕೆ ಕೊಟ್ಟು ಅವರ ಜ್ಞಾನ ಸಂಪತ್ತನ್ನು ಹೆಚ್ಚಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಹೇಳುತ್ತೇನೆ. ಚಿತ್ರ ಮಂದಿರಗಳು ಬರಿ ವಿದ್ಯಾಭ್ಯಾಸದ ಸಾಧನೆಗಾಗಿಯೇ ಅಲ್ಲದೆ ಮನೋರಂಜನೆಗೂ ಕೂಡ ಅನುಕೂಲವಾಗುತ್ತದೆ. ನಮ್ಮ ಬೆಂಗಳೂರು ನಗರದಲ್ಲಿಯೂ ಕೂಡ ಅನೇಕ ಚಿತ್ರಮಂದಿರಗಳಿವೆ. ಅಲ್ಲಿ ಸಾವಿರಾರು ಜನರು ಚಿತ್ರವನ್ನು ನೋಡುವುದಕ್ಕಾಗಿ ಸಾಲು ಸಾಲಾಗಿ ನಿಂತಿರುತ್ತಿರುವುದನ್ನು ನಾವು ಕಾಣುತ್ತಿದ್ದೇವೆ, ಇದರಿಂದ ಜನಗಳಲ್ಲಿ ಚಿತ್ರವನ್ನು ನೋಡಬೇಕೆನ್ನುವ ಅಭಿಮಾನ ಎಷ್ಟು ಹೆಚ್ಚಾಗಿದೆ ಎನ್ನುವುದು ನಮಗೆ ಸ್ಪಷ್ಟವಾಗುತ್ತದೆ.

2-30 P.M.

ಅಂದರೆ ಮನುಷ್ಯನಿಗೆ ಬೇರೆ ಕೆಲಸವಿಲ್ಲದೆ ಇದ್ದಾಗ ಅಥವಾ ಉದ್ಯೋಗದಿಂದ ಬೇಸರವಾದಾಗ ತನ್ನ ಮನಸ್ಸನ್ನು ಇನ್ನೊಂದು ಕಡೆ ತಿರುಗಿಸಬೇಕೆಂದು ಅನಿಸಿದಾಗ ಚಿತ್ರಮಂದಿರಗಳಿಗೆ ಹೋಗಿ ಚಿತ್ರಗಳನ್ನು ನೋಡತಕ್ಕಂಥಾದು ಉಂಟು. ಚಿತ್ರಗಳಿಂದ ಅನೇಕ ವಿಷಯಗಳು ಜನಗಳಿಗೆ

(ಶ್ರೀ ಆರ್. ಮುನಿಸ್ವಾಮಯ್ಯ)

ಗೊತ್ತಾಗುತ್ತವೆ. ಅನೇಕ ಜನ ತಮ್ಮ ಸ್ಥಳಗಳಿಂದ ಪರದೇಶಗಳಿಗೆ ಅಥವಾ ದೂರದ ಪ್ರದೇಶಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಅಂಥವರು ಈ ಚಿತ್ರಗಳ ಮೂಲಕ ಪರದೇಶ ಅಥವಾ ಬೇರೆ ಬೇರೆ ಪ್ರಾಂತ್ಯಗಳ ವಿಷಯಗಳನ್ನು ನೋಡಿ ತಿಳಿದುಕೊಳ್ಳುವ ಅವಕಾಶವಿದೆ. ಮತ್ತು ಚಲನ ಚಿತ್ರಗಳಿಂದ ಅನೇಕ ಜನರಿಗೆ ಉದ್ಯೋಗ ಸಹ ದೊರೆಯುತ್ತದೆ. ಫಿಲ್ಮ್ ಕೈಗಾರಿಕೆ, ಫೋಟೊ ಕೈಗಾರಿಕೆ ಮತ್ತು ಯಂತ್ರಗಳ ಕೈಗಾರಿಕೆ ಅಭಿವೃದ್ಧಿಯಾಗಿ ಅನೇಕ ಜನರಿಗೆ ಉದ್ಯೋಗ ಸಹ ದೊರೆಯುತ್ತದೆ. ಚಲನಚಿತ್ರಗಳಿಗೆ ಉತ್ತೇಜನ ಕೊಡುವುದರ ಮೂಲಕ ಅನೇಕ ಕತೆಗಾರರಿಗೆ, ಕವಿಗಳಿಗೆ, ಸಂಗೀತಗಾರರಿಗೆ ಒಂದು ಉತ್ತೇಜನ ದೊರಕುವುದಲ್ಲದೆ, ಉದ್ಯೋಗವೂ ದೊರಕುತ್ತದೆ. ಅಗಲೂ ಜನಗಳ ಅಭಿವೃದ್ಧಿಯಾಗುತ್ತದೆ. ಚಿತ್ರಗಳು ಬಹಳ ಶುಷ್ಕವಾಗಿ ಸತ್ಯವಾಗಿರತಕ್ಕಂಥಾದ್ದು ಸಾಧ್ಯವಿಲ್ಲ. ಪೂರ್ವಕಾಲದ ಸಂಗೀತಗಳಿಂದ, ಶಾಸ್ತ್ರೀಯ ಸಂಗೀತಗಳಿಂದ, ಮನರಂಜನೆಗಾಗಿ ಹೊಸರೀತಿಯ ರಾಗಗಳನ್ನು ರಚಿಸಿ ಅಳವಡಿಸಿದ ಚಿತ್ರಗಳಿಂದ, ವ್ಯಂಗ್ಯ ಚಿತ್ರಗಳನ್ನು ಸತ್ಯರೀತಿಯಲ್ಲಿ ಮತ್ತು ಅದ್ಭುತವಾಗಿ ತೋರಿಸುವುದರಿಂದ ಜನಗಳ ಮನಸ್ಸು ಆಕರ್ಷಣೆಯಾಗುವುದುಂಟು. ಚಲನ ಚಿತ್ರಗಳಿಂದ ಅನೇಕರು ಹೊಸ ಭಾಷೆಗಳನ್ನು ಕಲಿತಿರತಕ್ಕಂಥಾದ್ದುಂಟು. ಆದತಕ್ಕಂಥ ಬಾಷೆಯಲ್ಲಿಯೂ ಪ್ರಗತಿಯಾಗಿರುವುದುಂಟು-ಸ್ವಂತ ಭಾಷೆಯಾಗಿದ್ದರೂ ಚಿತ್ರಗಳ ಮೂಲಕ ಭಾಷೆಯನ್ನು ಶುದ್ಧಿ ಮಾಡಿಕೊಂಡು, ಆಳವಾದ ಶುದ್ಧವಾದ ಭಾಷೆಯನ್ನು ಕಲಿತವರುಂಟು.

ಈಗಿರತಕ್ಕಂಥ ಚಿತ್ರಮಂದಿರಗಳನ್ನೂ ಟೂರಿಂಗ್ ಟಾಕಿಸುಗಳನ್ನೂ ನೋಡುತ್ತಿದ್ದೇವೆ. ಈ ಚಿತ್ರಮಂದಿರಗಳು ಕೆಲವಾರು ವರ್ಷಗಳ ಹಿಂದೆ ಕಟ್ಟಿಸಿದ ಮಂದಿರಗಳು. ಅಲ್ಲಿ ಕುಳಿತು ನೋಡುವುದಕ್ಕೆ ಸಾಕಾದಷ್ಟು ಅನುಕೂಲಗಳಿಲ್ಲ. ಜನಗಳು ಕುಳಿತಿದ್ದರೆ ಮುಂದಿನ ಸೀಟುಗಳು ಮೊಣಕಾಲಿಗೆ ತಗುಲುತ್ತವೆ. ಒಂದು ಪಂಕ್ತಿಗೂ ಇನ್ನೊಂದು ಪಂಕ್ತಿಗೂ ಜಾಸ್ತಿ ಜಾಗ ಬಿಡದಿದ್ದರಿಂದ, ಜನಗಳು ಓಡಾಡುವುದು ಸಾಧ್ಯವಿಲ್ಲ ಕೆಲವು ಮಂದಿರಗಳಲ್ಲಿ ಚಿತ್ರಗಳ ಮೇಲೇ ದೀಪ ಬೀಳುತ್ತದೆ. ಇದರಿಂದ ಕಣ್ಣುಗಳಿಗೆ ಅಪಾಯ. ಈಗ ತಂದಿರತಕ್ಕಂಥ ಮಸೂದೆಯಲ್ಲಿ ಇದನ್ನೆಲ್ಲಾ ಸರಿಪಡಿಸಲು ಸ್ವಲ್ಪವಟ್ಟಿಗೆ ಯೋಚನೆ ಮಾಡಬೇಕು.

ಯಾವುದದಾದರೂ ಫಿಲ್ಮು ಬಹಿರಂಗ ಪ್ರದರ್ಶಕ್ಕೆ ಯೋಗ್ಯವಾಗಿರುವುದಿಲ್ಲ ಎಂದು ಅಭಿಪ್ರಾಯಪಟ್ಟರೆ ಅದಕ್ಕೆ ಕೊಟ್ಟ ಲೈಸೆನ್ಸನ್ನು ಹಿಂದಕ್ಕೆ ತೆಗೆದುಕೊಳ್ಳಬಹುದು ಎಂದು ಇದರಲ್ಲಿ ಹೇಳಿದ್ದೀರಿ. ಅದು ಸರಿಯಾದ ವಿಷಯ. ಲೈಸೆನ್ಸು ಕೊಡುವಾಗಲೇ ಇದು ಇಂಥ ಚಿತ್ರ ಎಂದು ಗೊತ್ತಿರುವುದಿಲ್ಲ, ನಾವು ಸ್ವಲ್ಪ ಕಾದು ನೋಡಿ ಆ ಮೇಲೆ ರದ್ದು ಮಾಡಬೇಕಾದ ಪರಿಸ್ಥಿತಿ ಇದೆ. ಲೈಸೆನ್ಸ್ ಕೊಡತಕ್ಕಂಥ ಅಧಿಕಾರಿಗಳು, ಫಿಲ್ಮು ಚಿತ್ರಮಂದಿರಕ್ಕೆ ಬಂದಕೂಡಲೆ ಮೊದಲನೆಯ ಪ್ರದರ್ಶನಕ್ಕೆ ಹೋಗಿ, ನೋಡಿ, ಲೈಸೆನ್ಸು ಕೊಟ್ಟಿದ್ದು ಸರಿಯೆ ಅಥವಾ ಹಿಂದಕ್ಕೆ ತೆಗೆದುಕೊಳ್ಳಬೇಕೆ ಎನ್ನುವ ಬಗ್ಗೆ ಪರ್ಯಾಲೋಚಿಸಬೇಕು.

ಲೈಸೆನ್ಸು ಎಂಥ ವ್ಯಕ್ತಿಗೆ ಕೊಡಬೇಕು ಎನ್ನುವುದೂ ಇದರಲ್ಲಿದೆ. ಹಿಂದೆ ಈ ವೃತ್ತಿಯಲ್ಲಿರತಕ್ಕಂಥವನ ಅನುಭವವನ್ನು ನೋಡಿ, ಕೊಡಬೇಕೆ ಬೇಡವೆ ಎಂಬತಕ್ಕಂಥದ್ದನ್ನು ನಿರ್ಧರಿಸಬೇಕು ಎಂದು ಇದರಲ್ಲಿ ಕೊಟ್ಟಿದ್ದೀರಿ. ಹಿಂದೆ ವೃತ್ತಿಯಲ್ಲಿರತಕ್ಕಂಥವರಿಗೆ ಮಾತ್ರ ಲೈಸೆನ್ಸು ಕೊಡುವ ಪಕ್ಷದಲ್ಲಿ, ಹೊಸಚಿತ್ರಮಂದಿರಗಳನ್ನು ಸ್ಥಾಪಿಸಬೇಕೆಂದಿರುವವರಿಗೆ, ಟೂರಿಂಗ್ ಟಾಕೀಸ್ ಮೊದಲಾದುವುಗಳನ್ನು ಇಟ್ಟುಕೊಳ್ಳತಕ್ಕಂಥ ಜನರಿಗೆ ಇಂಥ ನಿಯಮದಿಂದ ಒಂದುವೇಳೆ ಅಡ್ಡಿಬರುತ್ತದೆ ಎಂದು ನಾನು ಅನುಮಾನಪಡುತ್ತೇನೆ. ಅದಕ್ಕೋಸ್ಕರವಾಗಿ ಹಿಂದಿನಿಂದ ಈ ಉದ್ಯೋಗದಲ್ಲಿ ಅನುಭವ ಇಲ್ಲದೆ ಹೋದರೂ, ಆ ಮನುಷ್ಯನು ನಡೆಸಬಲ್ಲನೆ ಎನ್ನತಕ್ಕಂಥಾದ್ದನ್ನು ತಿಳಿದು ಲೈಸೆನ್ಸು ಕೊಡಬೇಕು ಎಂದು ಹೇಳುತ್ತೇನೆ.

ಇಷ್ಟುಮಾತ್ರ ಹೇಳಿ, ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ವ ೧ಕ್ಕಣ್ಣಪ್ಪ.—ಅಧ್ಯಕ್ಷರೆ, ಈ ಚಲನಚಿತ್ರ ಮಂದಿರಗಳನ್ನು ಸರ್ವಾಂಗಸುಂದರವಾಗಿ ಇಟ್ಟು, ಮನರಂಜನೆಗೆ ಹೋಗತಕ್ಕಂಥ ಜನಗಳು ಅದರ ಸುಖ ಅನುಭವಿಸಬೇಕು ಎಂಬ ಉದ್ದೇಶದಿಂದ ಸರ್ಕಾರದವರು ಈ ವಿಧೇಯಕವನ್ನು ತಂದಿದ್ದಾರೆ. ಲೈಸೆನ್ಸು ಹೇಗೆ ಕೊಡಬೇಕು, ಚಿತ್ರಮಂದಿರಗಳು ಹೇಗಿರಬೇಕು, ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಚಿತ್ರಮಂದಿರಗಳಿರಬೇಕು, ಅವುಗಳು ಎಂಥೆಂಥ ಚಿತ್ರಗಳನ್ನು ಪ್ರದರ್ಶನ ಮಾಡಬೇಕು, ಲೈಸೆನ್ಸುಗಳನ್ನು ಯಾವ ರೀತಿ ಕೊಡಬೇಕು ಇತ್ಯಾದಿ ಎಲ್ಲಾ ವಿಷಯಗಳನ್ನೂ ಕಾನೂನಿನಲ್ಲಿರತಕ್ಕಂಥ ಕಲಮುಗಳಲ್ಲಿ ತುಂಬಿ, ಏಕರೂಪತೆ ಇರಬೇಕೆಂದು ವಿಷಯಗಳನ್ನೆಲ್ಲಾ ಕ್ರೋಢೀಕರಿಸಿ, ನಮ್ಮ ಮುಂದೆ ಈ ವಿಧೇಯಕವನ್ನು ಮಾಡಿ, ಮೈಸೂರು ಸಿನಿಮಾಸ್ (ರೆಗ್ಯುಲೇಷನ್) ಬಿಲ್ಲನ್ನು ಸರ್ಕಾರದವರು ಮಂಡಿಸಿದ್ದಾರೆ.

ನಮ್ಮ ಹಿಂದಿನ ಅನುಭವವನ್ನು ಗಣನೆಗೆ ತೆಗೆದುಕೊಂಡು, ಮುಂದೆ ಒಂದು ನೂನನ್ನು ಮಾಡುವಾಗ ಹಿಂದಿನ ಕಾನೂನಿನಲ್ಲಿದ್ದ ಲೋಪದೋಷಗಳನ್ನು ಸರಿಪಡಿಸಬೇಕೇಹೊರತು, ಹಿಂದಿನ ದನ್ನೆಲ್ಲಾ ತೆಗೆದುಕೊಂಡು ಇವರಲ್ಲಿ ಉದ್ಧರಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಹಳೆ ಮೈಸೂರು ರಾಜ್ಯದಲ್ಲಿ ಸಿನಿಮಾ ಮಂದಿರಗಳು ಎಷ್ಟರಮಟ್ಟಿಗೆ ಇವೆ, ಅವುಗಳಿಗೆ ಯಾವ ತರಹ ಲೈಸೆನ್ಸು ಕೊಡುತ್ತಿದ್ದಾರೆ ಎಂಬ ಅನುಭವ ನನಗೆ ಸ್ವಲ್ಪ ಇದೆ. ಇವತ್ತಿನ ದಿವಸ ಕಟ್ಟಿರತಕ್ಕಂಥ ಸಿನಿಮಾ ಮಂದಿರಗಳು ಈಗಲೊ ಆಗಲೊ ಅವುಗಳ ಚಾವಣಿ ಜನಗಳ ಮೇಲೆ ಬೀಳುವಹಾಗಿವೆ. ಅಂಥ ಮಂದಿರಗಳ ಮಾಲೀಕರ ಮೇಲೆ ಸರ್ಕಾರದವರು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡು ಸರಿಪಡಿಸುವುದಕ್ಕೆ ಪ್ರಯತ್ನಪಟ್ಟಿಲ್ಲ. ಕಾನೂನು ಇದೆ, ಆದರೂ ಯಾವ ಚಲನ ಚಿತ್ರಮಂದಿರವೂ ಸರಿಯಾಗಿಲ್ಲ. ಅದನ್ನು ರೀಮಾಡಲ್ ಮಾಡಿಸುವುದಕ್ಕೆ ಅಥವಾ ಕೆಡವಿ ಬೇರೆ ತರಹ ಕಟ್ಟಿಸುವುದಕ್ಕೆ ನಿಮಗೆ ಅಧಿಕಾರವಿದೆ. ಈಗಿರುವ ಕಾನೂನನ್ನು ಎನ್‌ಫೋರ್ಸ್ ಮಾಡುವುದಕ್ಕೆ ಅಧಿಕಾರಿಗಳು ಇದ್ದರೂ ಅಧಿಕಾರಿಗಳಿಗೆ ಸಾಕಷ್ಟು ಅಧಿಕಾರವಿದ್ದರೂ, ಅಧಿಕಾರವನ್ನು ಚಲಾಯಿಸಿ ಡಿಫೆಕ್ಟುಗಳನ್ನು ಸರಿಮಾಡದೆಹೋದರೆ, ಈ ಹೊಸ ಕಾನೂನನ್ನು ಮಾಡಿ ಎಷ್ಟರಮಟ್ಟಿಗೆ ಫಲ ಸಾಧನೆ ಮಾಡುತ್ತೀರಾ ಎಂದು ಸರಕಾರವನ್ನು ಕೇಳುತ್ತೇನೆ.

ಇವತ್ತು ಟೂರಿಂಗ್ ಟಾಕೀಸ್‌ಗಳಿಗೆ ಲೈಸೆನ್ಸು ಕೊಡುತ್ತೀರ; ಒಂದು ಸಾವಿರ ಕಿಂಡಿಗಳು ಅವುಗಳ ಡೇರೆಗಳಲ್ಲಿ ಇರುತ್ತವೆ. ಮಳೆ ಬಿದ್ದರೆ ನೀರೆಲ್ಲಾ ಒಳಗೇ ಇರುತ್ತದೆ. ಒಳಗಿರುವ ಹೆಂಗಸರು ಮಕ್ಕಳು ತೋಯಿದು ಹೋಗುತ್ತಾರೆ, ಅವರ ಗತಿ ಏನು ? ಅಂಥ ಟಾಕಿಗಳಿಗೆ ಲೈಸೆನ್ಸನ್ನು ಪೋಲೀಸಿನವರು ರೆಕಮೆಂಡ್ ಮಾಡಿರುತ್ತಾರೆ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಲೈಸೆನ್ಸ್ ಕೊಟ್ಟಿರುತ್ತಾರೆ. ಪೋಲೀಸಿನವರು ಶಿಫಾರಸು ಮಾಡಿದಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆಟೋಮ್ಯಾಟಿಕ್ ಆಗಿ ಲೈಸೆನ್ಸು ಕೊಟ್ಟುಬಿಡುತ್ತಾರೆ. ಸಿನಿಮಾ ಟೆಂಟು ಚೆನ್ನಾಗಿದೆಯೆ, ಪ್ರೊಜೆಕ್ಟರು ಚೆನ್ನಾಗಿದೆಯೆ, ಬೆಂಕಿ ಅನಾಹುತ ನಡೆದರೆ ಅದನ್ನು ಆರಿಸುವುದಕ್ಕೆ ಎಕ್ವಿಪ್‌ಮೆಂಟ್ ಇದೆಯೆ ಅನ್ನುವುದನ್ನೆಲ್ಲಾ ನೋಡುವುದೇ ಇಲ್ಲ. ಪೋಲೀಸು ಸೂಪರಿಂಟೆಂಡೆಂಟರು ರೆಕಮೆಂಡ್ ಮಾಡುತ್ತಲೂ ಲೈಸೆನ್ಸ್ ಕೊಟ್ಟುಬಿಡುತ್ತಾರೆ. ಈಗಿರುವ ಕಾನೂನನ್ನು ಇಷ್ಟರಮಟ್ಟಿಗೆ ಅಲ್ಲಗಳೆಯುತ್ತಿರುವಾಗ, ಇನ್ನೊಂದು ಹೊಸ ಕಾನೂನನ್ನು ಮಾಡಿ ಕಡಿತಕ್ಕೆ ಏಕೆ ಸೇರಿಸುತ್ತೀರ ?

ಲೈಸೆನ್ಸಿಂಗ್ ಅಥಾರಿಟಿ ತೀರ್ಮಾನವಾದಮೇಲೆ, ಅಪಲೇಟ್ ಅಥಾರಿಟಿ ಯಾರು ಎಂದು ಪ್ರಿಸ್ಕ್ರೈಬ್ ಮಾಡಿಲ್ಲ. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟು ಲೈಸೆನ್ಸು ರೆಫ್ಯೂಸ್ ಮಾಡಿದರೆ ಯಾರ ಹತ್ತಿರ ಹೋಗಬೇಕು ? ಪ್ರಿಸ್ಕ್ರೈಬ್‌ಡ್ ಅಥಾರಿಟಿ ಯಾರು ಎಂದು ಈ ಕಾನೂನಿನಲ್ಲಿ ಹೇಳದೆಹೋಗಿರುವುದರಿಂದ, ಸರ್ಕಾರ ಎಂದು ಅರ್ಥ ಮಾಡಬೇಕೊ ? ಸರಕಾರದ ಮನಸ್ಸಿನಲ್ಲಿ ಏನಿದೆ ; ಅದು ಗೊತ್ತಾಗಲಿಲ್ಲ.

ಈ 19-20ನೆಯ ಕ್ಲಾಜುಗಳನ್ನು ನೋಡಿದರೆ ಬೇರೆ ರೂಲುಗಳನ್ನು ಮಾಡಿ ವ್ಯವಹಾರ ಮಾಡುವ ಹಾಗೆ ಕಾಣುತ್ತದೆ. ರೂಲುಗಳನ್ನು ಪ್ರಿಸ್ಕ್ರೈಬ್ ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ ಎಲ್ಲಾ ಪವರನ್ನೂ ಎಕ್ಸಿಕ್ಯೂಟೀವ್ ತೆಗೆದುಕೊಂಡು, ಬಾಲ್ಡ್ ಬಿಲ್ಲನ್ನು ನಮ್ಮ ಮುಂದಿಟ್ಟಿದ್ದಾರೆ. ಹೀಗೆ ಮಾಡಿದರೆ ನಾವು ಏನು ಹೇಳುವುದಕ್ಕೆ ಬರುತ್ತದೆ ? ಈಗ ಲೈಸೆನ್ಸು ಹೇಗೆ ಕೊಡಬೇಕು, ಟೆಂಟು ಎಷ್ಟು ಉದ್ದ, ಅಗಲ ಇರಬೇಕು ಇದನ್ನೆಲ್ಲಾ ರೂಲ್ಸಿನಲ್ಲಿ ಪ್ರೊವೈಡ್ ಮಾಡುತ್ತೇವೆಂದು ಹೇಳುತ್ತೀರ.

Sri R. M. PATIL.—Please read clause 20 carefully.

ಶ್ರೀ ಸಿ ಜೆ. ಮುಕ್ಕಣ್ಣಪ್ಪ.—ಅದನ್ನು ಓದಿದ್ದೇನೆ, ಸ್ವಾಮಿ. ರೂಲ್ಸ್ ಮತ್ತು ನೋಟಿಫಿಕೇಷನ್ನುಗಳನ್ನು ಸಭೆಯ ಮುಂದೆ ಮಂಡಿಸಿ ನಮಗೆ ಓದುವುದಕ್ಕೆ ಕೊಡುತ್ತೀರಿ. ಗೆಜೆಟ್‌ನಲ್ಲಿ ಎಷ್ಟೋ ನೋಟಿಫಿಕೇಷನ್ನುಗಳು ಬರುತ್ತವೆ. ಅದನ್ನು ನೋಡಿದರೂ ಸಾಮಾನ್ಯವಾಗಿ ಯಾರೂ ತಿದ್ದುಪಡಿಯನ್ನು ತರುವುದಿಲ್ಲ. ಅದನ್ನು ನೀವು ತಿಳಿದುಕೊಂಡೇ ಇದ್ದೀರಿ. ಎಷ್ಟೋ ವೇಳೆ ಕೋರ್ಟ್ ಕಚೇರಿಗೆ ಹೋದಾಗ ರೂಲ್ಸ್‌ನಲ್ಲಿ ಏನು ಹೇಳಿದೆ ಎಂದು ತೆಗೆಯುತ್ತೇವೆ. ಅದುವರೆಗೂ ಅದನ್ನು ಬಿಚ್ಚಿ ನೋಡುವುದೇ ಇಲ್ಲ. ಅದಕ್ಕೋಸ್ಕರ ಕೆಲವು ಅಂಶಗಳನ್ನು ಈ ವಿಧೇಯಕದಲ್ಲಿಯೇ ಅಡಕ ಮಾಡಿದರೆ ಚೆನ್ನಾಗಿರುತ್ತದೆ. ಇದು ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಅಲ್ಲಿ ತೀವ್ರವಾಗಿ ಯೋಚನೆ ಮಾಡಬೇಕು.

Definitions ನಲ್ಲಿ ಹೇಳಿದ್ದಾರೆ, "District Magistrate" means the Deputy Commissioner of a District ಎಂದು......" Deputy Commissioner is not a District Magistrate. He is an additional District Magistrate. Civil Judge is the District Magistrate in all the Districts......

Sri R. M. PATIL.—In various areas, various authorities are there. In old Bombay area, the District Magistrate means the Collector, now the Deputy Commissioner. Here, in old Mysore, the District Magistrate is a different authority. In all, to make it uniform, Deputy Commissioner is the District Magistrate for the purposes of this Act.

Sri C. J. MUCKANNAPPA—For the purpose of this Act, the Deputy Commissioner is called the District Magistrate. For other purposes, *viz.*, to take care of the police, to maintain law and order, etc., he is called the Additional District Magistrate in the District. ಇದು ಅರ್ಥವಾಗುವುದಿಲ್ಲ. ಏಕೆಂದರೆ ನಾನು ನಿಮ್ಮಷ್ಟು ಕಾಯಿದೆ, ಕಾನೂನುಗಳನ್ನು ಓದಿಲ್ಲ.

ಟೂರಿಂಗ್ ಟಾಕೀಸ್ ಬಗ್ಗೆ definitions ನಲ್ಲಿ ಏನೂ ಹೇಳಿಲ್ಲವೆಂದು ನಮ್ಮ ಸ್ನೇಹಿತರಾದ ಸುಂಠಣಕರ್ ಅವರು ಕೇಳಿದಾಗ definitions ನಲ್ಲಿ ಓದಿ ಎಂದು ಹೇಳಿದಿರಿ. ಅದರಲ್ಲಿ ಹೇಳಿರುವುದು ಹೀಗೆ:

"Place includes a house, building, tent and any description of transport - whether by water, land or air ;".

ವಿಮಾನದಲ್ಲಿ ಸಿನಿಮಾ ಪ್ರದರ್ಶನ ಆಗಬೇಕಾಗಿದೆ, ಸ್ವಾಮಿ. ಮೈಸೂರು ಸರ್ಕಾರ ಯಾವತ್ತು ಇಂಥ ವಿಮಾನವನ್ನು ತರಿಸುತ್ತಾರೆ ? ಇದು ನನಗೆ ಅರ್ಥವಾಗಲಿಲ್ಲ. 'Place includes a house, building, tent'—ಇದು ಸರಿ. Whether by water ಎಂದರೆ ನೀರಿನ ಮೇಲೆ ಯಾವ ಸಿನಿಮಾ ತೋರಿಸುತ್ತೀರಿ ? ಕಾಶ್ಮೀರದಲ್ಲಿ ಮಾಡಿರುವಂತೆ ನಮ್ಮ ರಾಜ್ಯದಲ್ಲಿಯೂ ದೋಣಿಗಳನ್ನಿಟ್ಟು, ಸಣ್ಣ ಸಣ್ಣ boat houses ಏನಾದರೂ ಮಾಡಿದ್ದೀರಾ ? ಇದನ್ನೆಲ್ಲ ನಮಗೆ ಗೃಹ ಸಚಿವರು ಹೇಳಬೇಕಾಗಿತ್ತು. ನೀರಿನ ಮೇಲೆ, ಗಾಳಿಯಲ್ಲಿ, ಸಿನಿಮಾ ನೋಡುವಷ್ಟು ನಾವು ಮುಂದುವರಿದಿದ್ದೇವೆ. ಅದಕ್ಕೋಸ್ಕರ ನಾನು ಈ ಸರ್ಕಾರಕ್ಕೆ ಧನ್ಯವಾದಗಳನ್ನರ್ಪಿಸುತ್ತೇನೆ.

ಮೂರನೆಯ ಕ್ಲಾಜಿನಲ್ಲಿ ಪ್ರಾವಿಸೋದಲ್ಲಿ ಹೇಳಿರುವುದು ಹೀಗಿದೆ.

"Provided that the State Government may, by notification, appoint for the whole or any part of the State such other authority as it may specify in the notification......"

ಇದು ನಮಗೆ ಅರ್ಥವಾಗುವುದಿಲ್ಲ. ಒಂದು ಕಡೆ ಡೆಪ್ಯುಟಿ ಕಮಿಷನರು ಎಂದೂ, ಇನ್ನೊಂದು ಕಡೆ ಯಾರನ್ನು ಬೇಕಾದರೂ licencing authority ಎಂಬುದಾಗಿ ನೇಮಕ ಮಾಡಬಹುದೆಂದು ಹೇಳುತ್ತೀರಿ. ನಿಮ್ಮ ಅಭಿಪ್ರಾಯವೇನು ಎನ್ನುವುದು ನಮಗೆ ಅರ್ಥವಾಗುವುದಿಲ್ಲ. Such other authority ಎಂದರೆ ಯಾರು ಎಂಬುದನ್ನು ತಿಳಿಸಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಉತ್ತರದಲ್ಲಿ ನಮಗೆ ಅರ್ಥವಾಗುವ ರೀತಿ ಅಪ್ಪಣೆ ಕೊಡಿಸಬೇಕು ಎಂದು ಕೇಳುತ್ತೇನೆ.

ಈ ಮಸೂದೆಯಲ್ಲಿ ಎಷ್ಟು ಸಾವಿರ ಜನಸಂಖ್ಯೆ ಇದ್ದರೆ ಎರಡು ಸಿನಿಮಾಗಳಿಗೆ ಲೈಸೆನ್ಸ್ ಕೊಡಬಹುದು, ಎಷ್ಟು ಜನರ ಒಳಗಿದ್ದರೆ ಒಂದಕ್ಕೆ ಲೈಸೆನ್ಸ್ ಕೊಡಬಹುದು ಎಷ್ಟು ಜನಸಾಂದ್ರತೆ ಇರಬೇಕು ಎಂಬುದನ್ನು ಹೇಳಿಲ್ಲ. ಈಗ ಐದು ಸಾವಿರ ಜನಸಂಖ್ಯೆ ಇರತಕ್ಕ ಊರುಗಳಲ್ಲಿ ಎರಡು ಸಿನಿಮಾಗಳಿಗೆ ಅಥವಾ ಹತ್ತು ಸಾವಿರ ಜನಸಂಖ್ಯೆಯಿರುವ ಕಡೆ ಎರಡು ಸಿನಿಮಾಗಳಿಗೆ ಲೈಸೆನ್ಸ್ ಕೊಡುತ್ತೀರೆಂದು ಇಟ್ಟುಕೊಳ್ಳೋಣ. ಆದರೆ ಅದೇ ಸಂದರ್ಭದಲ್ಲಿ ಐವತ್ತು ಸಾವಿರ ಜನ ಸೇರತಕ್ಕ ಜಾತ್ರೆಗಳಲ್ಲಿ ಒಂದೇ ಒಂದು ಸಿನಿಮಾಕ್ಕೆ ಲೈಸೆನ್ಸ್ ಕೊಡುತ್ತೀರಿ. 50 ಸಾವಿರ ಜನ ಸೇರತಕ್ಕ ಜಾತ್ರೆಗಳಲ್ಲಿ ಎಷ್ಟು ಸಿನಿಮಾಗಳಿಗೆ ಲೈಸೆನ್ಸ್ ಕೊಡಬೇಕು ಎಂಬುದನ್ನು ರೂಲ್ಸ್‌ನಲ್ಲಿ ಹೇಳುತ್ತೀರಾ, ಹೇಗೆ ಎಂಬುದು ನಮಗೆ ಅರ್ಥವಾಗುವುದಿಲ್ಲ. ಇದರ ಬಗ್ಗೆ ಸ್ವಲ್ಪ ವಿವರಣೆಗಳನ್ನು ಕೊಟ್ಟಿದ್ದರೆ ಇಷ್ಟು ಮಾತನಾಡಬೇಕಾದ ಪ್ರಮೇಯವಿರುತ್ತಿರಲಿಲ್ಲ. ತುಮಕೂರು ಜಿಲ್ಲೆಯಲ್ಲಿ ಕೊರಟಗೆರೆ ಕ್ಷೇತ್ರದಲ್ಲಿ ದೊಡ್ಡ ಜಾತ್ರೆ ಆಗುತ್ತದೆ. ಒಂದು ಲಕ್ಷಕ್ಕೆ ಮೇಲ್ಪಟ್ಟು ಜನ ಸೇರುತ್ತಾರೆ. ಅಂಥ ಕಡೆ ಎರಡು ಮೂರು ಸಿನಿಮಾಗಳಿಗೆ ಅವಕಾಶ ಕೊಡಬಹುದು. ಹೀಗೆಯೇ ಬೆಂಗಳೂರು ಜಿಲ್ಲೆಯಲ್ಲಿ ಘಾಟಿಸುಬ್ರಹ್ಮಣ್ಯ ಸ್ವಾಮಿ ಜಾತ್ರೆಯಲ್ಲಿಯೂ ಬಹಳ ಜನ ಸೇರುತ್ತಾರೆ. ಅಲ್ಲಿಯೂ ಎರಡು ಮೂರು ಸಿನಿಮಾಗಳಿಗೆ ಅವಕಾಶವನ್ನು ಕೊಡಬಹುದು. ಯಾವ ಆಧಾರದ ಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇತ್ಯರ್ಥ ಮಾಡುತ್ತಾರೆ ? ಅವರವರ discretion ಉಪಯೋಗಿಸಿ ಮಾಡಬೇಕಾ

ಗಿರುತ್ತದೆ. ಇಷ್ಟು ಜನಸಾಂದ್ರತೆ ಇದ್ದರೆ ಇಷ್ಟು ಸಿನಿಮಾಗಳಿಗೆ ಅವಕಾಶ ಕೊಡಬಹುದು ಎಂದು ಇದರಲ್ಲಿಯೇ ತಿಳಿಸಿದ್ದರೆ ಚೆನ್ನಾಗಿತ್ತು. ಸರ್ಕಾರದವರು ಈ ದಿಕ್ಕಿನಲ್ಲಿ ಸ್ವಲ್ಪ ಯೋಚನೆ ಮಾಡಬೇಕೆಂದು ನಾನು ಮಾನ್ಯ ಗೃಹ ಸಚಿವರಲ್ಲಿ ಕೇಳುತ್ತಿದ್ದೇನೆ.

"The licensing authority may, thereupon, after consulting such authority or officer as may be prescribed and subject to the provisions of this Act,....."

ಅದನ್ನು ಏಕೆ ಹಾಕಬಾರದಾಗಿತ್ತು. 'Such authority' ಎಂದರೆ ಹೇಗೆ?

The District Magistrate will ask the Police. He may, just consult the Superintendent of Police, who in turn will ask the Inspector and the Inspector will send a report.

ಅದಕ್ಕೋಸ್ಕರ ಡೆಪ್ಯುಟಿ ಕಮೀಷನರಿಗೆ ಈ ವಿಷಯದಲ್ಲಿ ಯಾರು ರಿಪೋರ್ಟ್, ವಗೈರೆ ಕೊಡತಕ್ಕವರು ಎನ್ನುವುದನ್ನು ಹೇಳಬೇಕಾಗಿತ್ತು. ಇದನ್ನು ಸೆಲೆಕ್ಟ್ ಕಮಿಟಿಯವರು ಯೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ, ಸ್ವಾಮಿ.

"Where the licensing authority refuses to grant the licence, it shall do so by an order communicated to the applicant, giving the reasons for such refusal"

†Sri D. PARAMESHWARAPPA (Honnali).—Mr. Speaker, Sir, This Bill, which is going to replace the old one is the result of amalgamation of many of the laws prevailing in different States and integrated areas and the object is to a uniform law so far as regulation of exhibition of films by means of cinematograph is concerned. Therefore, this Bill has got to be considered with all openmindedness and fairness and without any prejudgement. Commenting on this Bill, I would like to say at the very outset, that this Bill is devoid of any judicial tinge. If we see the provisions of sub-clause (3) of Clause 5, and Clauses 14 and 19, it is very evident that the executive authority is given unlimited powers and the orders passed by the executive authority cannot be questioned in a Court of Law. I submit that in this Bill there is not an riota of judicial tinge and therefore, I request the Hon'ble Minister to make provision that the orders passed by the executive authorities are made appealable so that they may be questioned in a Court of Law.

4-30 P.M.

[MR. DEPUTY SPEAKER in the Chair.]

Then I come to clause 1. Since the time at my disposal is very short, I do not want to go into the history of the cinemas or their relative role in society. Item (5) of clause 2 reads :

> " place " includes a honse, building, tent and any description of transport-whether by water, land or air ; "

If this Bill is going to be referred to a select Committee, my submission is that the rules that the Government may frame in this behalf will not be discussed before the select committee. Therefore, any term or any word should be well defined in this Bill. This word 'description of transport' is very ambiguous and instead of that I would suggest :

> " any mobile unit specially meant for exhibiting films "

This is a very apt definition of the word 'place.' Therefore, I would suggest to the Minister that instead of the definition, 'discription of transport,' he may insert the wording " any mobile unit specially meant for exhibiting films. "

Under this clause the licencing authority is the Deputy Commissioner and the conditions of licence are nowhere mentioned in this Bill. My suggestion is that before issuing licence to any applicant, there should be specific conditions laid down in the licence and these conditions should be strictly fulfilled, and if these conditions are violated, then there should be scope for cancellation, of the licence. Therefore, in that licence itself, it is very necessary to incorporate that such and such conditions should be fulfilled before the licence is issued and there should be periodical inspection after the licence is issued by the concerned authorities, whether these conditions are violated of fulfilled. As suggested by my friend Sri Suryanarayan, these periodical inspections are not provided here. When a licence is refused under clause 5 (3) there is no rule for appeal against the order of refusal. There should be some scope to question the validity, legality or propriety of the order of refusal in a court of law. Therefore provision must be made for a party to appeal against any order of refusal of licence.

Clause 6 (d): As it is, the previous speakers have spoken about this clause. Status and previous experience of the applicant have to be taken into consideration in granting licence. I cannot understand what previous experience the applicant should possess. It is not normally stated in what way we should gain experience. What should be his status, it is not normally stated and it gives room for one more difficulty. It gives room for monopoly by certain persons, if this clause is not altered. And so far as adequacy of existing place for exhibition of cinematograph films in the locality is concerned, certain factors are very necessary to be considered in determining this adequacy. These factors or circumstances are not mentioned in order to determine the adequacy of the existing places. It is very necessary that certain circumstances should be defined to fix up adequacy of places.

Clause 7: Restriction of powers of licencing authority—If clauses 4 and 5, are independently read, it looks as if a person who wants to run a cinema has got to obtain two licences. According to clause 4, cimematograph exhibition has to be licenced. He has to obtain a licence. Then again, licence has to be obtained for the use of the place for cinematograph films. According to this, a person has to obtain 2 licences if he has to run a cinema. Therefore it is very essential that there should be provision for obtaining only one licence and that there should be no scope for two licenses.

Clause 7-restriction of powers of licencing authority, it is very ambigious. Clause 7 should, therefore be made very clear.

Clauses 8–Licence personal to the grantee and not transfeable. So far as this clause is concerned, suppose a person obtains a licence and according to licence he is allowed to run the cinema for a period of three years. In the meanwhile, he dies. Should it mean that the cinema should be stopped? According to clause 8, it means that after the death of the proprietor the licence is automatically cancelled and the

(SRI D. PARAMESHWARAPPA)

person who has invested a huge amount or his legal heirs are exposed to this loss or danger. Therefore, even the law of succession should be considered and legal heirs of any proprietor who dies in the meanwhile should have the right of running the cinema and it should be presumed that the licence is automatically transferred in the name of the legal heirs of the deceased. It is very desirable to make such an amendment or alteration to give the right to the legal heirs of the deceased proprietor of the cinema Appeal against decision under clause 4 and 8 lies to the State Government and not to any court of law; The appeal should not lie to the State Government but to a court of law; that is what I suggest.

Coming to clause 10 Construction or reconstruction of buildings for exhibition of cinematograph films only to be made after obtaining perimi. sion of licensing authority, I would like to suggest that it is better to have approved plans according to the various localities. In a big city like Bangalore, people can afford to construct a magnificent building for cinema shows, but in taluks and other places, people will not be in a position to invest huge sums of money on the construction cinemas. What I suggest is that there should be approved plans according to which the proprietors or the license holders should construct cinema buildings,haveing regard to the sanitary conditions and other conveninces which have already been referred to by the previous speakers. I submit there should be three types of plans for the construction or reconstruction of cinema buildings one applicable to big cities like Bangalore, secound type applicable to district head quarters, and the third type applicable to taluka places. There should be three types of plans and any license holder should construct the building on the model of any one of these plans.

So far clause 14 is concerned, I will have to oppose this clause very vehemently for the reason that Gorernment has reserved the right suspend the exhibition of films and those cases are when there is likeli hood of breach of peace or for any other sufficient reason. What 'sufficient reason' is, is not defined in this Bill. One thing I wish to submit in connection with clause 14 is that this power can be misused. There is always the Board of Censors and if any film has to be exhibited, it has to scurtinised by the Board; only after they approve the film it can be run. When a person exhibits a film, which has been passed by the Board of Censors, certain hooligans set up by some other persons who want to cause loss or injury to the proprietor, may create some mischief or trouble. Under such circumstances, Government or the authority cannot take shelter under this provision and snspend the license therefore this provision under clause 14 is rather very harsh and it is better that this provision is deleted.

So for as penalty clause is concerned, my friends have already submitted that the owner of a site on which the film is exhibited is made liable for the penalty. It is not justifiable to hold the owner of a site responsible or liable for any offence committed by the exhibitor.

Certain powers are reserved for the Government to revoke license. If a person incurs disabilities uuder certain Acts, why should be deemed to be disqualified to run a show under this Bill which is applicable to the regulation of exhibition of films by means of cinematographs? That looks rather very absurd. This is saparate Bill and there is goiug to be a separate enactment.

Clause 18 Power to make rules. These rules should be formed in conformity with the provisions of the Bill and these rules are generally not discussed before the Joint Select Committee to which this Bill is referred. It is necessary that these rules are discussed in the Joint Select Committee is conformity with the provisions of the Bill.

With these observations, I feel that it is very desirable to refer this Bill to a Joint Select Committee for consideration of all these provisions in detail.

†ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).—ಸ್ವಾಮಿ, ಸಿನಿಮಾ ಮಂದಿರಗಳು ಬೆಂಗಳೂರು ನಗರದಲ್ಲಿ ಸುಮಾರು 50ಕ್ಕೆ ಮೇಲ್ಪಟ್ಟು ಇವೆ. ಈ ಮಸೂದೆಯ ಬಗ್ಗೆ ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲ. ಆದರೂ ಬೆಂಗಳೂರು ನಗರದ ಜನತೆಯ ದೃಷ್ಟಿಯಿಂದ ಎರಡು ಮಾತುಗಳನ್ನಾಡುವುದಕ್ಕೆ ಪ್ರಯತ್ನಿಸುತ್ತೇನೆ. ಸರ್ಕಾರದವರು ಸಿನಿಮಾ ಮಂದಿರಗಳಿಗೆ ಪರ್ಮಿಷನ್ ಕೊಡುವಾಗ ಕಾರ್ಪೊರೇಷನವರನ್ನೂ consult ಮಾಡಬೇಕೆಂದು ಎಷ್ಟು ಪ್ರಯತ್ನಪಟ್ಟಾಗ್ಯೂ ಕೂಡ ಅದು ನಿಷ್ಪ್ರಯೋಜನವಾಗಿದೆ. ಎಲ್ಲಿ ವಿದ್ಯಾ ಸಂಸ್ಥೆಗಳಿವೆ, ಎಲ್ಲಿ ಅವುಗಳಿಗೆ ಸೇರಿದ ಆಟದ ಮೈದಾನಗಳು ಮತ್ತು ಇತರ ವಿಶಾಲವಾದ ಪ್ರದೇಶಗಳಿವೆ, ಅಂಥ ಪ್ರದೇಶಗಳನ್ನೆಲ್ಲ ಸಿನಿಮಾ ಮಂದಿರಗಳಿಗೋಸ್ಕರ ಕೊಡುವ ಪದ್ಧತಿ ಸರ್ಕಾರದಲ್ಲಿ ಬಂದಿದೆ. ಇದು ಬಹಳ ತಪ್ಪು. ಉದಾಹರಣೆಗಾಗಿ ಹೇಳುವುದಾದರೆ, ಸಿಟಿ ಮಾರ್ಕೆಟ್ ಹತ್ತಿರ ದೊಡ್ಡಣ್ಣ ಶೆಟ್ಟರೆಂಬ ಮಹನೀಯರು ವಿಶಾಲವಾದ ಜಾಗವನ್ನು ಪಡೆದು ಅಲ್ಲಿ S.L.N. ವಿದ್ಯಾ ಸಂಸ್ಥೆಗಳನ್ನು ಎಂದರೆ ಪ್ರೈಮರಿ, ಮತ್ತು ಹೈಸ್ಕೂಲುಗಳನ್ನು ಪ್ರಾರಂಭಿಸಿದರು. ಅವು ಬಹಳ ಚೆನ್ನಾಗಿ ನಡೆದುಕೊಂಡು ಬರುತ್ತಿವೆ. ಇದಕ್ಕೆ ಸೇರಿದಂತೆ ಆಟದ ಮೈದಾನವಿತ್ತು. ಮಕ್ಕಳ ಆಟಪಾಟಗಳಿಗೆ ಮತ್ತು ವ್ಯಾಯಮಕ್ಕೆ ಆಟದ ಮೈದಾನ ಅಗತ್ಯ. ಇದಕ್ಕೆ ಸೇರಿದಂತೆ ಬಹಳ ಹಿಂದಿನಿಂದಲೂ ಒಂದು ಸಿನಿಮಾ ಮಂದಿರವಿವೆ. ಇದರ ಜೊತೆಗೆ ಶಾಲೆಗೆ ಸೇರಿದ ಆಟದ ಬಯಲಿನಲ್ಲಿ ಮತ್ತೊಂದು ಸಿನಿಮಾ ಕಟ್ಟಡ ನಿರ್ಮಾಣವಾಗುತ್ತಿದೆ ಇವುಗಳಲ್ಲಿ ಬೆಳಗಿನ ಆಟಗಳೂ ನಡೆಯುತ್ತಿವೆ. ಹಗಲು ಹತ್ತೂವರೆ ಗಂಟೆಯಿಂದ ಹುಡುಗರು ಶಾಲೆಯಲ್ಲಿರಬೇಕಾದ ಸಮಯದಲ್ಲಿ ಬೆಳಗಿನ ಆಟಗಳು ನಡೆದರೆ, ಅದಕ್ಕೆ ಹುಡುಗರು ಹೋಗುವುದಕ್ಕೆ ಸರ್ಕಾರವೇ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ಇದು ಬಹಳ ತಪ್ಪು.

ಜನತೆ ವಾರವೆಲ್ಲ ಕೆಲಸಮಾಡಿ ಸಂಜೆಯಲ್ಲಿ ಹೊತ್ತು ವಿಶ್ರಾಂತಿ ಪಡೆಯಲು, ಮನರಂಜನೆಗಾಗಿ ಸಿನಿಮಾಕ್ಕೆ ಹೋಗುವ ಮನೋಭಾವ ಬರುತ್ತವೆ, ಬೆಂಗಳೂರು ದಿನೇ ದಿನೇ ಬೆಳೆಯುತ್ತಿರುವ ನಗರ ಪ್ರಜಾಸಂಖ್ಯೆಯೂ ಹೆಚ್ಚುತ್ತಿದೆ. ಸಿನಿಮಾ ನೋಡಲು ಬಂದವರಿಗೆ ಒಂದು ಮಂದಿರದಲ್ಲಿ ಸೀಟು ಸಿಕ್ಕದೆ ಹೋದರೆ ಮತ್ತೊಂದಕ್ಕೆ ಹೋಗುವಂಥ ಸೌಲಭ್ಯವಿರಬೇಕು. ಆದುದರಿಂದ ಒಂದೇಕಡೆ ಸಿನಿಮಾ ಮಂದಿರಗಳಿರುವಂಥ ವ್ಯವಸ್ಥೆ ಮಾಡಿ ವಿಶಾಲವಾಗಿರತಕ್ಕ ರಸ್ತೆಗಳು ಕಾರ್ ಪಾರ್ಕ್ ಇವೆಲ್ಲ ಇರುವಂತೆ ಏರ್ಪಾಡು ಮಾಡಬೇಕು. ಬೆಂಗಳೂರು ನಗರದಲ್ಲಿಯ ಅನೇಕ ಚಿತ್ರ ಮಂದಿರಗಳಲ್ಲಿ ನೀರಿನ ಅಭಾವದಿಂದ ಬಹಳ ಅನಾನುಕೂಲತೆ ಇದೆ. ಯಾರಾದರೂ ಕಕ್ಕಸಕ್ಕೆ ಹೋದರೆ ಅಲ್ಲಿ ನೀರು ಇರುವುದಿಲ್ಲ. ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಟೌನ್ ಹಾಲಿನಲ್ಲಿಯೂ ಕಕ್ಕಸಕ್ಕೆ ಹೋದರೆ ನೀರಿನ ವ್ಯವಸ್ಥೆ ಇಲ್ಲ. ಸಿನಿಮಾ ಲೈಸೆನ್ಸ್ ಕೊಡುವಾಗ್ಗೆ ನೀರು ಗಾಳಿ ಬೆಳಕು ಇವುಗಳ ವ್ಯವಸ್ಥೆ ಚೆನ್ನಾಗಿ ಮಾಡಬೇಕೆಂದು ಕಂಡಿಷನ್ನು ಹಾಕಬೇಕು. ಹೊಸದಾಗಿ ಕಟ್ಟಿಸಿರುವ ನಾಟಕ ಮಂದಿರದಲ್ಲಿರುವ ಹಾಗೆ ಕುಳಿತುಕೊಳ್ಳುವ ಅರೆಂಜಮೆಂಟು ಇರಬೇಕು. ಒಬ್ಬರು ಕುಳಿತಿದ್ದರೆ ಇನ್ನೊಬ್ಬರು ಹಾದುಹೋಗುವ ಹಾಗೆ ಅನುಕೂಲ ಇರಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಸ್ವಾಮಿ, ಈ ವಿಶಾಲ ಮೈಸೂರು ರಾಜ್ಯಕ್ಕೆ ಅನ್ವಯಿಸತಕ್ಕಂಥ ಮಸೂದೆಯನ್ನು ತಂದಿದ್ದಾರೆ. ಈ ಮಸೂದೆ ಮೇಲಿನ ಚರ್ಚೆ ಅರ್ಧಗಂಟೆಯಲ್ಲಿ ಮುಗಿಯಬಹುದು. ಇದರಲ್ಲಿ ಒಂದೆರಡು ಹೊಸ ವಿಷಯಗಳು ಮಾತ್ರ ಇವೆ ಎಂದು ನಾನು

(ಶ್ರೀ ಕೆ. ಸಿ. ರೇವಣಸಿದ್ದಪ್ಪ)

ತಿಳಿದುಕೊಂಡಿದ್ದೆನು. ದಿನಗಳ ಬದಲಾವಣೆಯಾದ ಹಾಗೆ ಹೊಸ ದಾರಿ ಮಾಡಿರಬಹುದು ಎಂದು ಭಾವಿಸಿದ್ದೆನು. ಹಿಂದಿನ ಅನುಭವ ತೆಗೆದುಕೊಂಡು ತಮ್ಮ ಬುದ್ಧಿ ಶಕ್ತಿ ಉಪಯೋಗಿಸಿ ಹೊಸದಾಗಿ ಏನಾದರೂ ತಂದಿದ್ದರೆ ಚೆನ್ನಾಗಿತ್ತು. ಆದರೆ 'old wine in new bottle' ಎಂದು ಹೇಳಿದ ಹಾಗೆ ಹಳೆಯದನ್ನೇ ಹೊಸದಾಗಿ ತಂದಿದ್ದಾರೆ. ಈ ಮಸೂದೆ ಅಷ್ಟು ಸಮರ್ಪಕವಾಗಿಲ್ಲ. ಯಾರು ಬೇಕಾದವರಿಗೂ ಸಿನಿಮಾ ಲೈಸೆನ್ಸ್ ಕೊಡಬಹುದು. ಗ್ರಾಮಾಂತರ ಪ್ರದೇಶದಲ್ಲಿ ಟೆಂಟ್ ಸಿನೆಮಾ ಯಾವ ರೀತಿ ಇರುತ್ತದೆ ಎಂಬುದು ಮಾನ್ಯ ಸದಸ್ಯರನೇಕರಿಗೆ ಗೊತ್ತಿದೆ. ಒಂದು ವೇಳೆ ಅಂಥವರಿಗೆ ಲೈಸೆನ್ಸ್ ಕೊಡದಿದ್ದರೆ ಅವರು ನೇರವಾಗಿ ಬೆಂಗಳೂರಿಗೆ ಬಂದು ಮಂತ್ರಿಗಳನ್ನು ಕಂಡು ಲೈಸೆನ್ಸ್ ಕೊಡಿಸುವ ಬಗ್ಗೆ ಡೆಪ್ಯೂಟಿ ಕಮಿಷನರ್ ಅವರಿಗೆ ಫೋನು ಮಾಡಿ ಎಂದು ಹೇಳ ಬೇಕಾಗುತ್ತದೆ. ಹೀಗೆ ಫೋನ್ ಮಾಡಿಸಿ ಲೈಸೆನ್ಸ್ ಪಡೆಯುತ್ತಾರೆ. ಡಿ.ಸಿ. ಅವರು ಯಾರಿಗೆ ಬೇಕೋ ಅವರಿಗೆ ಲೈಸೆನ್ಸ್ ಕೊಡಲಿ. ಅವರನ್ನು ಬಿಟ್ಟು ಸರಕಾರದವರಿಗೆ ಬರಬೇಕೆಂದು ಅಂದರೆ ಅದರ ಅರ್ಥವೇನು ? ಇದು ನಿಜವಾಗಿಯೂ ಸರಿಯಾಗಿಲ್ಲ. ಇಂಥ ಸಂದರ್ಭದಲ್ಲಿ ಮುನಿಸಿಪಾಲ್ಟಿ ಪ್ರೆಸಿಡೆಂಟ್, ಅಲ್ಲಿಯ ತಹಶೀಲದಾರು ಅಲ್ಲಿಯ ಅಸಿಸ್ಟೆಂಟ್ ಕಮಿಷನರ್ ಇವರು ಸ್ಥಳೀಯ ಜನರ ಸಲಹೆ ಪಡೆದು ಲೈಸೆನ್ಸ್ ಕೊಡುವ ಅಧಿಕಾರ ಕೊಡಬೇಕು.

ಸ್ವಾಮಿ, ಈಗ ಏನಾಗಿದೆ ಎಂದರೆ ಒಬ್ಬನು ಹೇಗೋ ಒಂದು ಲೈಸೆನ್ಸ್ ಪಡೆದು ಒಂದು ಟೆಂಟ್‌ಹಾಕಿ ಎಲ್ಲಿಂದಲೋ ಮೂರು ಪ್ರೊಜೆಕ್ಟರ್ಸ್ ತಂದು ಸಿನೆಮಾ ಪ್ರಾರಂಭ ಮಾಡುತ್ತಾನೆ. ಮೊದಲು ಮೂರು ತಿಂಗಳು ಲೈಸೆನ್ಸ್ ದೊರೆತರೆ ಅದಕ್ಕೆ ಕೃಷ್ಣ ಟೂರಿಂಗ್ ಟಾಕೀಸ್ ಎಂದು ಕರೆಯುತ್ತಾನೆ. ಅದಾದನಂತರ ಮತ್ತೆ ಆರು ತಿಂಗಳು ಲೈಸೆನ್ಸ್ ಪಡೆಯಲು ಶ್ರೀ ಕೃಷ್ಣ ಟೂರಿಂಗ್ ಟಾಕೀಸ್ ಎಂದು ಹೆಸರಿಟ್ಟು ಅಲ್ಲಿಯೇ ನಡೆಸುತ್ತಾನೆ. ಮತ್ತೆ ಮುಂದಿನ ಅವಧಿಗೆ ಉಮಾಮಹೇಶ್ವರ ಎಂದು ಹೆಸರಿನಿಂದ ಕರೆಯುತ್ತಾನೆ. ಹೀಗೆ ಹೆಸರು ಮಾತ್ರ ಬದಲಾವಣೆ ಮಾಡುತ್ತಾ ಮೂರು ನಾಲ್ಕು ಲೈಸೆನ್ಸ್ ಪಡೆದು ಒಂದೇ ಊರಿನಲ್ಲೇ ಬಹುಕಾಲ ಇರುತ್ತಾನೆ. ಆದ್ದರಿಂದ ಲೈಸೆನ್ಸ್ ಪಡೆಯಲು ಮಂತ್ರಿಗಳ ಹತ್ತಿರ ಬರುವ ಹಾಗೆ ಮಾಡುವುದು ಅವರಿಗೂ ತೊಂದರೆ, ಮಂತ್ರಿಗಳಿಗೂ ಇಕ್ಕಟ್ಟಿನ ಪರಿಸ್ಥಿತಿ ಉಂಟಾಗುತ್ತದೆ. ಇಂಥ ಸಣ್ಣಪುಟ್ಟ ಅಧಿಕಾರ ಮಂತ್ರಿಗಳು ಇಟ್ಟುಕೊಳ್ಳುವುದು ಬಹಳ ಅನ್ಯಾಯ. ಇದನ್ನು ಕಾನೂನಿನಲ್ಲ ಸರಿಪಡಿಸಬೇಕು. ಮುಖ್ಯವಾಗಿ ಎಲ್ಲರಿಗೂ ಬೇಕಾಗಿರುವುದೇನೆಂದರೆ ಚಿತ್ರಮಂದಿರವನ್ನು ನೋಡಿದರೆ ಅದರಿಂದ ಎಲ್ಲ ರಿಗೂ ಸಂತೋಷವಾಗಬೇಕು. ಹಿಂದಕ್ಕೆ ಒಬ್ಬ ಅಧಿಕಾರಿ ಇದ್ದರು. ಅವರು ಶಿವಮೊಗ್ಗಾಕ್ಕೆ ಟೂರ್ ಮೇಲೆ ಹೋದಾಗ್ಗೆ ಅಲ್ಲಿಯ ಎಲ್ಲ ಚಿತ್ರಮಂದಿರವನ್ನು ನೋಡಿ ಎಲ್ಲ ಲೈಸೆನ್ಸ್ ಕ್ಯಾನ್ಸಲ್ ಮಾಡಿದರು. ಆ ಮೇಲೆ ಬೆಂಗಳೂರಿಗೆ ಬಂದ ನಂತರ ಆ ಎಲ್ಲ ಲೈಸೆನ್ಸ್ ಪುನಃ ಕೊಟ್ಟುಬಿಟ್ಟರು. ಇದರ ಒಳ ಅರ್ಥ ಏನಿದೆ ಎಂಬುದು ಎಲ್ಲರಿಗೂ ಅರ್ಥವಾಗುತ್ತದೆ. ಇಂಥ ಸಂದರ್ಭ ಬರಬಾರದು. ನಾನು ಬಹಳ ಧೈರ್ಯವಾಗಿ ಒಂದು ಮಾತನ್ನು ಹೇಳುತ್ತೇನೆ. ಈ ಚಿತ್ರ ಮಂದಿರಗಳಿಗೆ ಹೋದ ವರು ರೋಗರುಜಿನ ಕೊಂಡು ತರುವ ಹಾಗೆ ಆ ಮಂದಿರಗಳು ಇವೆ. ಅಲ್ಲಿ ಕುಳಿತರೆ ತಿಗಣೆ ಕಾಟ, ಮಳೆ ಬಂದರೆ ನೀರು ಒಳಗೆ ಬರುತ್ತದೆ. ಗಾಳಿ ಬೆಳಕಿನ ವ್ಯವಸ್ಥೆ ಇರುವುದಿಲ್ಲ. ಮಲಮೂತ್ರ ವಿಸರ್ಜನೆಗೆ ಅನುಕೂಲವಿರುವುದಿಲ್ಲ. ಒಂದು ವೇಳೆ ಅಂಥ ವ್ಯವಸ್ಥೆ ಇದ್ದರೂ ಅಲ್ಲಿ ಮೂಗು ಹಿಡಿದುಕೊಂಡು ಹೋಗಬೇಕಾಗುತ್ತದೆ. ದುರ್ವಾಸವೆ ತುಂಬಿರುತ್ತದೆ. ಇಂಥ ಕೆಟ್ಟ ಪರಿಸ್ಥಿತಿ ಯಲ್ಲಿ ಚಿತ್ರಮಂದಿರಗಳು ನಡೆಯುತ್ತಿವೆ. ಈ ವಿಷಯ ನಮ್ಮ ಮಾನ್ಯ ಮಂತ್ರಿಗಳಿಗೆ ಗೊತ್ತಿರಲಿಕ್ಕೆ ಬೇಕು. ಏಕೆಂದರೆ ಅವರೂ ನಮ್ಮ ಹಾಗೆ ಇದ್ದವರು; ಈಗ ಮಂತ್ರಿಗಳಾಗಿದ್ದಾರೆ. ಆದ್ದರಿಂದ ನಾನು ಅವರಿಗೆ ಹೇಳುವುದು ಇಷ್ಟೇ; ಯಾರಿಗೆ ಬೇಕೋ ಅವರಿಗೆ ಲೈಸೆನ್ಸ್‌ಕೊಡಿ. ಲೈಸೆನ್ಸ್ ಇದೊಂದು ವ್ಯಾಪಾರವಾಗಿದೆ. ಬಸ್ ಲೈಸೆನ್ಸ್ ಹಾಗೆ ಸಿನೆಮಾ ಲೈಸೆನ್ಸ್‌ನ ವಿಚಾರವಾಗಿಯೂ ಹೇಳುವುದಾ ದರೆ, ಲೈಸೆನ್ಸ್ ಪಡೆಯುವವರು ಒಬ್ಬರಾದರೆ ನಡೆಸುವವರು ಇನ್ನೊಬ್ಬರು. ಆದುದರಿಂದ ನಾಲ್ಕು ಜನ ಲೈಸೆನ್ಸ್ ಕೇಳಿದರೆ ನಾಲ್ಕೂ ಜನಕ್ಕೆ ಲೈಸೆನ್ಸ್ ಕೊಡಿ. ಅದರಿಂದ ಜನಕ್ಕೆ ಅನುಕೂಲ ವಾಗುತ್ತದೆ. ನೀವು ಮಾಡುವ ಕಾನೂನಿನಿಂದ ಸಿನೆಮಾ ಮಾಲೀಕರಿಗೆ ತೊಂದರೆಯಾಗುತ್ತದೆ. ಇಂಥ ಕಾನೂನಿನಿಂದ ಮತ್ತೆ ಏನಾಗುತ್ತದೆ ಎಂದರೆ ಸಾಮಾನ್ಯ ಮನುಷ್ಯನಿಗೆ ಲೈಸೆನ್ಸ್ ಸಿಕ್ಕು ವುದಿಲ್ಲ. ಯಾರಿಗೆ ಇನ್‌ಫ್ಲುಯೆನ್ಸ್ ಇದೆಯೋ ಅಂಥವರಿಗೆ ಸಿಕ್ಕುತ್ತದೆ. ಯಾವಾಗಲೂ ಜನರ ಹಿತದೃಷ್ಟಿ ಇರಬೇಕು. ಬಂಡವಾಳ ಹಾಕಿದ ಮಾಲೀಕನು ತನ್ನ ಹಿತ ತಾನು ನೋಡಿಕೊಳ್ಳು ತ್ತಾನೆ. ಚಿತ್ರಮಂದಿರಗಳಲ್ಲಿ ಸ್ವಚ್ಛತೆ ಇರಬೇಕು, ಜನರಿಗೆ ಸೌಕರ್ಯ ಇರಬೇಕು ಇಂಥ ಕಂಡಿಷನ್ಸ್ ಹಾಕಬಹುದು. ಇದಲ್ಲದೆ ನಮ್ಮ ದೇಶಭಾಷೆಗೆ ಪ್ರೋತ್ಸಾಹ ಕೊಡಬೇಕು ಎಂದು ಇರಬೇಕು. ಬರೀ ಭಾಷಣದಲ್ಲಿ ಹೇಳಿದರೆ ಸಾಕಾಗದು. ಬೆಂಗಳೂರು ನಗರದಲ್ಲಿ ಕನ್ನಡ

ಚಿತ್ರಗಳು ಎಷ್ಟು ನಡೆಯುತ್ತವೆ ಮತ್ತು ಬೇರೆ ಭಾಷೆಯ ಚಿತ್ರಗಳು ಎಷ್ಟು ನಡೆಯುತ್ತವೆ ಎಂಬುದನ್ನು ತಾವು ನೋಡಿರಬಹುದು. ಕನ್ನಡಕ್ಕೆ ಸಾಕಷ್ಟು ಪ್ರೋತ್ಸಾಹವಿಲ್ಲ. ಆದುದರಿಂದ ಕನ್ನಡಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯುವಂತೆ ಮಾಡುವುದು ಅಗತ್ಯ. ಅದರಂತೆ ಕನ್ನಡ ಚಿತ್ರಮಂದಿರಗಳಿಗೂ, ಕನ್ನಡ ನಟ ವರ್ಗದವರಿಗೂ ಸಹ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ಒಬ್ಬರು ಯಾವುದೋ ಒಂದು ನಾಟಕ ಕಂಪೆನಿಯ ಮ್ಯಾನೇಜರು ಆಗಿದ್ದರು. ಅವರಿಗೆ ಕಲಾವಿಶಾರದ ಎಂದು ಟೈಟಲ್ ಕೊಟ್ಟಿದ್ದೀರಿ, ನಿಜವಾಗಿಯೂ ಯಾವನು ಅದರಲ್ಲಿ ಪರಿಣತನೋ ಅವನನ್ನು ಸನ್ಮಾನಿಸುವುದಿಲ್ಲ. ಪಾಪ, ಪುಣ್ಯ ನೋಡಿ, ದೇವರು ನಿಮಗೆ ಎಷ್ಟು ದಿವಸ ಅಧಿಕಾರದಲ್ಲಿಟ್ಟಿರುತ್ತಾನೆ, ಎಂದಿದ್ದರೂ ಅದನ್ನು ಬಿಡಬೇಕಾಗುತ್ತದೆ ಎನ್ನುವುದನ್ನು ನೀವು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗೇನೋ ಕನ್ನಡ ಚಿತ್ರಗಳಿಗೆ ಪ್ರೋತ್ಸಾಹ ಕೊಡುವುದಕ್ಕೆ ಸ್ಟುಡಿಯೋ ಮಾಡುತ್ತೇವೆ ಎಂದು ಬಹಳ ದಿವಸದಿಂದ ಹೇಳುತ್ತಾ ಬಂದಿದ್ದೀರಿ. ನೀವು ಮಾಡಿದ ಭಾಷಣ ಏನಾಗಿದೆ ? ಯಾರಾದರೂ ನಾಟಕದವರು ಕರೆದರೆ ಅದಕ್ಕೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೀರಿ. ಮಲ್ಲಯುದ್ಧ ಮಾಡುವವರು ಕರೆದರೆ ಬಹಳ ಒಳ್ಳೆಯದು ಒಳ್ಳೆ ಜಟ್ಟಿಗಳನ್ನು ತಯಾರು ಮಾಡಬೇಕೆಂದು ಹೇಳುತ್ತೀರಿ, ಪೋಲೀಸ್‌ನವರು ಕರೆದರೆ ಪೋಲೀಸ್‌ನವರು ಬಹಳ ಚೆನ್ನಾಗಿ ಕೆಲಸ ಮಾಡಬೇಕು ಎಂದು ಹೇಳುತ್ತೀರಿ. ಈ ರೀತಿ ಗ್ರಾಮಾಫೋನ್ ರೆಕಾರ್ಡ್ ಹಾಕಿದ ಹಾಗೆ ಮಾತನಾಡುತ್ತೀರಿ, ಆಯಾ ಕಾಲ ಸನ್ನಿವೇಶಕ್ಕೆ ತಕ್ಕಂತೆ. ರೈತರು ಕರೆದರೆ ರೈತರು ನಮ್ಮ ದೇಶದ ಬೆನ್ನುಮೂಳೆ, ಅವರು ಚೆನ್ನಾಗಿ ಕೆಲಸ ಮಾಡಬೇಕು, ಹೆಚ್ಚಿಗೆ ಬೆಳೆಯಬೇಕು, ಅವರಿಂದಲೇ ದೇಶ ಉದ್ಧಾರವಾಗುವುದು ಎಂದು ಮುಂತಾಗಿ ಹೇಳುತ್ತೀರಿ...

5-00 P.M.

ಶ್ರೀ ಆರ್. ಎಂ. ಪಾಟೀಲ್.—ಹೇಳಿದನ್ನೆಲ್ಲಾ ಕೇಳಿಕೊಂಡು ಹೋಗುತ್ತೀರಲ್ಲಾ ;

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಏನು ಮಾಡುವುದು ನೀವು ಹೇಳಿದ್ದನ್ನೆಲ್ಲಾ ಕೇಳಬೇಕಾಗಿದೆ; ಕೇಳುತ್ತೇವೆ.

ಎಷ್ಟು ಜನ ಬೇಕಾದರೂ ಕೇಳಲಿ, ಅವರಿಗೆ ಲೈಸೆನ್ಸ್ ಕೊಡಿ.

ಶ್ರೀ ಆರ್. ಎಂ. ಪಾಟೀಲ್.—ಕೊಡುವುದಿಲ್ಲ ಎಂದು ಭಾವಿಸಿಕೊಂಡು ಏಕೆ ಹೇಳುತ್ತೀರಿ ?

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಏಕೆಂದರೆ ನಾಳೆ ದಿವಸ ಮಂತ್ರಿಗಳ ಮನೆಬಾಗಿಲಿಗೆ ಬಂದರೆ ನಿಮಗೆ ಕಷ್ಟಕ್ಕೆ ಬರುತ್ತದೆ. ಇಷ್ಟು ಹೇಳಿ ಹೋಂ ಮಿನಿಸ್ಟರು ಈ ವಿಷಯದಲ್ಲಿ ಹೆಚ್ಚು ಗಮನ ಕೊಟ್ಟು ಒಳ್ಳೆಯ ಕೀರ್ತಿ ಸಂಪಾದಿಸುತ್ತಾರೆ ಎಂದು ಭಾವಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಈಗ ಅರ್ಧಗಂಟೆ ಕಾಲ ಹೆಚ್ಚಿಸಿದ್ದಾರೆ, ಇನ್ನೂ ಅನೇಕರು ಈ ಮಸೂದೆಯ ಮೇಲೆ ಮಾತನಾಡುವವರು ಇರುವುದರಿಂದ ಇನ್ನರ್ಧ ಗಂಟೆ ಕಾಲ ಹೆಚ್ಚಿಸಬೇಕೆಂದು ಹೇಳುತ್ತೇನೆ.

Sri S. SIVAPPA.—Sir, I move that the time for this Bill be extended by one hour.

Mr. DEPUTY SPEAKER.—Does the House agree to the extension ?

HON'BLE MEMBERS.—Yes.

ಶ್ರೀ ಸಂಜೀವನಾಥ ಐಕಳ (ಸೂರತ್ಕಲ್).—ಮಾನ್ಯ ಸಭಾಪತಿಗಳೇ, ಈ ಮಸೂದೆಯ ಮೇಲೆ ಈಗಾಗಲೇ ಮಾತನಾಡಿದ ಸದಸ್ಯರು ಹೇಳಿದ ವಿಷಯಗಳನ್ನೇ ನಾನೂ ಹೇಳದೆ ಒಂದೆರಡು ಹೊಸ ವಿಷಯಗಳನ್ನು ನಿಮ್ಮ ಮುಂದೆ ಇಡುತ್ತೇನೆ. ಇವತ್ತು ಚಲನಚಿತ್ರ ಪ್ರದರ್ಶನ ಬಹಳ ಪ್ರಾಮುಖ್ಯ ಸ್ಥಾನವನ್ನು ವಹಿಸಿದೆ. ಚಲನಚಿತ್ರ ನೋಡುವಂತಹದು ಸಾಮಾನ್ಯ ಜನರ ಹವ್ಯಾಸ ಅಥವಾ ಅಭ್ಯಾಸವಾಗಿ ಹೋಗಿದೆ. ಈ ಚಲನಚಿತ್ರದ ಚಟ ಎಷ್ಟುಮಟ್ಟಿಗೆ ಹೋಗಿದೆ ಎಂದರೆ ನಾಲ್ಕು ಮಂದಿ ಮಾನ್ಯ ಮಂತ್ರಿಗಳು ಇತ್ತೀಚೆಗೆ ಒಂದು ಸಿನಿಮಾ ಮಂದಿರದ ಉದ್ಘಾಟನೆಯಲ್ಲಿ ಭಾಗವಹಿಸಿದ್ದರು. ಇದರಿಂದ ಚಲನಚಿತ್ರದ ಪ್ರದರ್ಶನಕ್ಕೆ ಎಷ್ಟು ಪ್ರಾಮುಖ್ಯತೆ ಇದೆ ಎನ್ನುವುದು ಗೊತ್ತಾಗುತ್ತದೆ, ಇದು ಚಲನಚಿತ್ರದ ಆಕರ್ಷಣೆಯನ್ನು ಎತ್ತಿ ತೋರಿಸುತ್ತದೆ. ಈ ಚಲನಚಿತ್ರಗಳಿಂದ ಅನೀತಿಯ ವ್ಯವಹಾರಗಳಿಗೆ ಹೆಚ್ಚಿನ ಅವಕಾಶ ಉಂಟಾಗಿದೆ ಎಂದು ಕಾಣುತ್ತದೆ. ಇವತ್ತು ಜನಸಾಮಾನ್ಯರಲ್ಲಿ ಕಂಡುಬರುವ ನೈತಿಕಮಟ್ಟದ ಅಧಃಪತನಕ್ಕೆ ಚಲನಚಿತ್ರ ಪ್ರದರ್ಶನವೇ ಕಾರಣವಾಗಿದೆ. ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಡುವುದಕ್ಕೆ ಬದಲಾಗಿ ಜನರಿಗೆ ಬೇಕಾದ ರಿಕ್ರಿಯೇಷನ್ ಫೆಸಿಲಿಟೀಸ್ ಏನಿವೆ ಅವನ್ನು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕವಾಗಿ

(ಶ್ರೀ ಸಂಜೀವನಾಥ ಐಕಳ)

ಯಾಗಲಿ ಇತರ ಚಟುವಟಿಕೆಗಳ ಮೂಲಕವಾಗಿಯಾಗಲಿ ಒದಗಿಸುವುದು ಒಳ್ಳೆಯದು. ಆ ದೃಷ್ಟಿಯಿಂದ ಒಂದೆರಡು ಸಲಹೆಗಳನ್ನು ಮಾಡಲು ಬಯಸುತ್ತೇನೆ. ಅದೇನೆಂದರೆ ಸರ್ಕಾರದವರು ಇದರಲ್ಲಿ ಬರುವಂತಹ ಆರ್ಥಿಕ ದೃಷ್ಟಿಯ ಲಾಭವನ್ನು ಅಷ್ಟು ನೋಡದೆ ನೈತಿಕಮಟ್ಟ, ನೈತಿಕ ವ್ಯವಹಾರ ಮೇಲೆ ಬರುವಂತೆ ಮಾಡಲು ಪ್ರಯತ್ನ ಮಾಡಬೇಕಾದ್ದು ಅವರ ಕರ್ತವ್ಯ. ಇದಕ್ಕಾಗಿ ಅನುಕೂಲತೆ ಮಾಡಲು ನನ್ನ ಸಲಹೆ ಏನೆಂದರೆ ಈಗ ಪಟ್ಟಣಗಳಲ್ಲಿ ಸಿನಿಮಾ ಮಂದಿರಗಳವರು ನಡೆಸುತ್ತಿರುವ 3 ಅಥವಾ ಕೆಲವು ದಿವಸಗಳಲ್ಲಿ 4 ಪ್ರದರ್ಶನಗಳಿಗೆ ಬದಲಾಗಿ ಒಂದು ಲಕ್ಷ ಜನಸಂಖ್ಯೆ ಇರತಕ್ಕ ಸ್ಥಳಗಳಲ್ಲಿ 2 ಪ್ರದರ್ಶನ ಒಂದು ಲಕ್ಷಕ್ಕೂ ಕಡಿಮೆ ಜನಸಂಖ್ಯೆ ಇರತಕ್ಕ ಸ್ಥಳಗಳಲ್ಲಿ ದಿನಕ್ಕೆ ಒಂದೇ ಪ್ರದರ್ಶನ ನಡೆಸುವಂತೆ ಏರ್ಪಾಡು ಮಾಡುವುದು ಬಹಳ ಅಗತ್ಯವಾಗಿದೆ. ಈ ರೀತಿ ಮಾಡಿದರೆ ಚಲನಚಿತ್ರ ಪ್ರದರ್ಶನವನ್ನು ನೋಡುವವರು ಯಾರಿದ್ದಾರೆಯೋ ಅವರ ಸಂಖ್ಯೆ ಕಡಮೆಯಾಗಿ ಅವರು ತಮ್ಮಷ್ಟಕ್ಕೆ ತಾವೇ ಬೇರೆ ಇತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗುವುದಕ್ಕೆ ಅನುಕೂಲವಾಗುತ್ತದೆ. ನನ್ನ ಈ ಸೂಚನೆ ಏನಿದೆ ಇದು ಬಹುಶಃ ಎಲ್ಲಾ ಮಾನ್ಯ ಸದಸ್ಯರಿಗೂ ಮತ್ತು ಸರ್ಕಾರದವರಿಗೂ ಕೂಡ ಒಪ್ಪಿಗೆ ಆಗಬಹುದು ಎಂಬ ಆಶೆ ನನಗೆ ಇದೆ. ಮೊದಲು ಎರಡು ಪ್ರದರ್ಶನಗಳು ಇದ್ದದ್ದು ಇತ್ತೀಚೆಗೆ ಮೂರು ಪ್ರದರ್ಶನಗಳನ್ನು ಮಾಡಿದ್ದಾರೆ. ಶನಿವಾರ ಮತ್ತು ಆದಿತ್ಯವಾರಗಳಲ್ಲಿ ನಾಲ್ಕು ಪ್ರದರ್ಶನಗಳನ್ನು ಕೂಡ ಏರ್ಪಾಡು ಮಾಡಿದ್ದಾರೆ ಎಂದು ಕೇಳಿದ್ದೇನೆ. ಕಾಲೇಜು ಮತ್ತು ಹೈಸ್ಕೂಲು ವಿದ್ಯಾರ್ಥಿಗಳು ಮಾರ್ನಿಂಗ್ ಷೋ ಸಿನಿಮಾ ಪ್ರದರ್ಶನಕ್ಕೆ ಹೋಗುವುದು ಬಹಳ ಹೆಚ್ಚಾಗಿದೆ...

ಶ್ರೀ ಎನ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಈ ಸಿನಿಮಾ ಮಂದಿರಗಳನ್ನೆಲ್ಲಾ ತೆಗೆದು ಶಿಶುವಿಹಾರಗಳನ್ನಾಗಿ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಸಂಜೀವನಾಥ ಐಕಳ.—ಅವರ ಸಲಹೆ ಬಹಳ ಒಳ್ಳೆಯದು. ನಿಜವಾಗಿಯೂ ಅಂಥ ದಿನ ಯಾವಾಗ ಬರುತ್ತದೆಯೋ ಏನೋ ? ಅದು ಬರುವಂತೆ ಮಾಡಿದರೆ ಒಳ್ಳೆಯದು. ಬೆಂಗಳೂರು ನಗರದಲ್ಲಿ 58 ಸಿನಿಮಾ ಮಂದಿರಗಳು ಇವೆ. ದಿನಕ್ಕೆ 4 ಪ್ರದರ್ಶನಗಳನ್ನು ಏರ್ಪಡಿಸಿದರೆ ಎಷ್ಟು ಜನರು ಮಾಡತಕ್ಕ ಕೆಲಸವನ್ನು ಎಂದರೆ ಮ್ಯಾನ್ ಅವರ್ಸ್‌ನ್ನು (Man-hours) ಅದರಲ್ಲಿ ಕಳೆಯು ತ್ತಾರೆ, ಎಷ್ಟು ಜನರು ತಮ್ಮ ಹಣವನ್ನು ಅನಾವಶ್ಯಕವಾಗಿ ಪೋಲು ಮಾಡುತ್ತಾರೆ ಎಂಬುದ ನ್ನೆಲ್ಲಾ ನೋಡಿದರೆ ನಿಜವಾಗಿಯೂ ನಮ್ಮ ನೈತಿಕ ದೌರ್ಬಲ್ಯ ಎಷ್ಟುಮಟ್ಟಿಗೆ ಇದೆ, ಯಾವ ಮಟ್ಟಕ್ಕೆ ಇಳಿದು ಹೋಗಿದೆ ಎಂಬುದು ಕಾಣುತ್ತದೆ. ಅಮೂಲ್ಯವಾದ ಹಣವನ್ನು ಮತ್ತು ದೇಶದ ತುರ್ತು ಪರಿಸ್ಥಿತಿಯಲ್ಲಿ ಮ್ಯಾನ್ ಅವರ್ಸ್‌ನ್ನು ದೇಶದ ಉತ್ಪಾದನೆಯ ಕಾರ್ಯದಲ್ಲಿ ವಿನಿಯೋಗಿಸು ವುದರ ಬದಲು ಚಲನ ಚಿತ್ರ ಮಂದಿರದ ಬಾಗಿಲಿನಲ್ಲಿ ಸಾಲುಸಾಲಾಗಿ ಗಂಟೆಗಟ್ಟಲೆ ಟಿಕೆಟ್ಟಿಗಾಗಿ ಅರ್ಧ ಫರ್ಲಾಂಗ್‌ವರೆಗೂ ನಿಂತು ಹಣವನ್ನೂ ಮತ್ತು ಅಮೂಲ್ಯವಾದ ಕಾಲವನ್ನೂ ಕಳೆಯುತ್ತಿರು ವುದನ್ನು ನೋಡುವಾಗ ನಿಜವಾಗಿಯೂ ಇದರಿಂದ ಬಹಳ ಬೇಸರವಾಗುತ್ತದೆ. ಆದ್ದರಿಂದ ಸರ್ಕಾರದವರು ಈಗೇನೋ ಜನರ ನೈತಿಕ ಮಟ್ಟವನ್ನು ಹೆಚ್ಚುಮಾಡಲು ಕೆಲವು ಯೋಜನೆಗಳನ್ನು ಕೈಕೊಂಡಿದ್ದಾರೆ. ಅದರಲ್ಲಿ ಎಷ್ಟುಮಟ್ಟಿಗೆ ಸಫಲವಾಗಿದ್ದಾರೆ ಅಥವಾ ವಿಫಲವಾಗಿದ್ದಾರೆ ಎಂಬುದು ಬೇರೆ ಪ್ರಶ್ನೆ. ಜನರ ನೈತಿಕ ಮಟ್ಟ ಹೆಚ್ಚುವಂತೆ ಮಾಡುವುದು ಬಹಳ ಮುಖ್ಯವಾದುದು. ತಯಾರಿಸತಕ್ಕ ಚಿತ್ರ ಒಂದೇ ಬಗೆಯದು ಅದೂ ಬರಿ ಗಂಡು—ಹೆಣ್ಣುಗಳ ಪ್ರೇಮ ಚಿತ್ರಗಳು. ಅವುಗಳಿಗೆ ಹೆಸರನ್ನು ಮಾತ್ರ ಬೇರೆ ಬೇರೆ ಇಡುತ್ತಾರೆ. ನಾನು ಹೇಳಿದಂತೆ ಮಾಡಿದರೆ ಈ ಚಲನ ಚಿತ್ರಗಳ ತಯಾರಿಕೆ ಕೂಡ ಬಹಳ ಕಡಮೆಯಾಗುತ್ತದೆ. ಜನರು ಈ ಚಿತ್ರಮಂದಿರಗಳ ಚಟವನ್ನು ಬಿಟ್ಟಲ್ಲಿ ಅವರು ತಮ್ಮ ವೇಳೆಯನ್ನು ದೇಶೋದ್ಧಾರದ ಇನ್ನಿತರ ಕೆಲಸಗಳಿಗೆ ಬಳಸಲು ಅವಕಾಶ ವಾಗುತ್ತದೆ. ದೇಶದ ಉತ್ಪನ್ನ ಹೆಚ್ಚಿಸಲು ಇದೊಂದು ಒಳ್ಳೆಯಮಾರ್ಗ. ನನಗೆ ಇದರಲ್ಲಿ ತುಂಬಾ ವಿಶ್ವಾಸವಿದೆ. ಆದುದರಿಂದ ಈ ವಿಚಾರಗಳನ್ನೆಲ್ಲ ಜಂಟಿ ಪರಿಶೀಲನಾ ಸಮಿತಿಯವರು ತೀವ್ರವಾಗಿ ಗಮನಿಸಬೇಕೆಂದು ಹೇಳುತ್ತೇನೆ. ನಾನೀಗ ಕೊಟ್ಟಿರತಕ್ಕ ಸಲಹೆಗಳೇನಿವೆ ಅವು ಗಳನ್ನು ಮಾನ್ಯ ಮಂತ್ರಿಗಳು ದಯವಿಟ್ಟು ಸ್ವೀಕರಿಸಬೇಕೆಂದು ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ದೇವಯ್ಯ (ಮಂಡ್ಯ).—ಸ್ವಾಮಿ, ಈಗ ಈ ಚಲನಚಿತ್ರ ಕಾನೂನನ್ನು ನಮ್ಮ ಮಂತ್ರಿ ಗಳು ತಂದಿರತಕ್ಕದ್ದು ಬಹಳ ಸಂತೋಷದ ವಿಷಯ. ದೇಶದಲ್ಲಿ ನಡೆಯತಕ್ಕ ಆಡಳಿತದ ಒಂದು ಸುವ್ಯವಸ್ಥೆಗಾಗಿ ಇಂಥ ಕಾನೂನುಗಳನ್ನು ತರಬೇಕಾದುದು ನ್ಯಾಯವೆ. ಆದರೆ ಅವುಗಳು ಕಾರ್ಯತಃ ಯಾವ ರೀತಿ ಕೆಲಸಮಾಡುತ್ತವೆ ಎಂಬುದನ್ನು ನೋಡಬೇಕಾದುದು ಬಹಳ ಅಗತ್ಯ. ಆದರೆ ಇಂಥ ಕಾನೂನುಗಳನ್ನು ತರುವುದರಿಂದ ಮಂತ್ರಿಗಳಿಗೂ ಇಕ್ಕಟ್ಟು, ಜಿಲ್ಲಾಧಿಕಾರಿಗಳಿಗೂ

ಇಕ್ಕಟ್ಟು, ಕೆಲವು ವೇಳೆ ಸರ್ಕಾರಕೂ ಇಕ್ಕಟ್ಟು. ಏಕೆಂದರೆ ಇವರೆಲ್ಲರಲ್ಲೂ ಈ ಅಧಿಕಾರವಿರುತ್ತದೆ. ಇದರ ಸಂಪೂರ್ಣಾಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟು, ಅವರು ಲೈಸನ್ಸನ್ನು ನ್ಯಾಯವಾದ ಮನುಷ್ಯನಿಗೆ ಕೊಡದಿದ್ದಾಗ ಅದರ ಮೇಲೆ ಅಪೀಲ್ ಹಾಕುವುದಕ್ಕೆ ಒಂದು ಟ್ರೈಬ್ಯುನಲ್ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಅನಂತರ ಕೊನೇ ಅಪೀಲು ಸರ್ಕಾರಕ್ಕಿರುವುದು ಒಳ್ಳೆಯದು. ಜಿಲ್ಲಾಧಿಕಾರಿಗಳೇನೋ ಸರಿಯಾದ—ನ್ಯಾಯವಾದ ವ್ಯಕ್ತಿಗೇ ಲೈಸೆನ್ಸ್ ಕೊಡಬೇಕೆಂದಿದ್ದರೂ ಮಧ್ಯೇ ಕೆಲವು ಖಾಸಗೀ ಸ್ಥಳೀಯ ಡೆಪ್ಯುಟೀ ಕಮಿಷನರುಗಳಿದ್ದಾರಲ್ಲಾ ಅವರಿಂದ ಅದಕ್ಕೆ ಅಡಚಣೆ ಬರುತ್ತದೆ. ಅವರು ಆ ಖಾಸಗೀ ಡೆಪ್ಯುಟಿ ಕಮಿಷನರ ಮಾತನ್ನು ಕೇಳದಿದ್ದರೆ ಅವರಿಗೆ ಅಲ್ಲಿಂದ ವರ್ಗವೇ. ಇಂಥ ಅಡಚಣೆಗಳೆಲ್ಲ ಇವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಒಬ್ಬರದೇ ಎರಡು ಸಿನೀಮಾ ಥಿಯೇಟರುಗಳಿವೆ. ಅವರು ಹೇಳಿದ ರೇಟನ್ನು ಕೊಟ್ಟು ಹೋಗಬೇಕು. ಇಂಥ ವ್ಯವಸ್ಥೆಯಿಂದ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಾರೆ. ಅಲ್ಲಿ ಬೇರೆಯವರಿಗೆ ಥಿಯೇಟರನ್ನು ಕಟ್ಟಲು ಅವಕಾಶ ಕೊಟ್ಟರೆ ಪೈಪೋಟಿ ಹುಟ್ಟಿ ಪ್ರೇಕ್ಷಕರಿಗೆ ಅನುಕೂಲವಾಗುತ್ತದೆ. ಹೀಗೆ ಯಾವಾಗಲೂ ಒಬ್ಬರಿಗೇ ಅವಕಾಶಕೊಡಬಾರದು. ಅಲ್ಲಿ ಶನಿವಾರ, ಭಾನುವಾರ ಬಂತೆಂದರೆ ಹೊಡೆದಾಟದ ಸಿನೀಮವೆ ಏಕೆಂದರೆ ಬೇರೆ ಸಿನೀಮಾಗಳಿಲ್ಲ, ಅಲ್ಲಿ. ನಮ್ಮ ಮಂತ್ರಿಗಳು ಬಹಳ ನಿಧಾನಸ್ಥರು. ಹೊಸ ಸಿನೀಮಾಕ್ಕೆ ಲೈಸೆನ್ಸ್ ಕೊಡುವುದಕ್ಕೆ ಅವಕಾಶ ಕೊಡಬೇಕು. ಈಗ ಸರ್ಕಾರದವರು ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಿಕೊಂಡಿರುವಂತೆ ಸಿನೀಮಾಗಳನ್ನೂ ಏಕೆ ರಾಷ್ಟ್ರೀಕರಣ ಮಾಡಿಕೊಳ್ಳಬಾರದು? ಜಮೀನಿದ್ದವರಿಂದ ಕಿತ್ತು ಜಮೀನಿಲ್ಲದವರಿಗೆ ಜಮೀನು ಕೊಡಬೇಕೆಂದು ಕಾನೂನು ಮಾಡಿದ್ದಾಯಿತು. ಮಂತ್ರಿಗಳು ಇದನ್ನೆಲ್ಲ ಆಲೋಚನೆ ಮಾಡಬೇಕು. ನಮ್ಮ ಮಂತ್ರಿಗಳಿಗೆ ಧೈರ್ಯವಿದೆ, ಸಾಹಿಸಿಗಳು. ನೂರು ವರ್ಷ ಹಂದಿಯಹಾಗೆ ಬಾಳುವುದಕ್ಕಿಂತ, ಮೂರು ವರ್ಷ ಸಿಂಹದಹಾಗೆ ಬಾಳುವುದುತ್ತಮ ಎಂದು ಹೇಳುತ್ತೇನೆ. ಆದುದರಿಂದ ನಮ್ಮ ಗೃಹಮಂತ್ರಿಗಳು ಅವರಲ್ಲಿರತಕ್ಕ ಧೈರ್ಯಕ್ಕೆ ತಕ್ಕಹಾಗೆ ಇದನ್ನು ನಡೆಸಬೇಕೆಂದು ಹೇಳುತ್ತೇನೆ. ನಮ್ಮ ಪ್ರಧಾನಿ ನೆಹರೂರವರನ್ನು ಇಡೀ ಪಾರ್ಲಿಮೆಂಟೇ ಅವರು ಇರಲೇಬೇಕೆಂದು ಏಕೆ ಒತ್ತಾಯ ಮಾಡುತ್ತಿದ್ದಾರೆ? ನಮಗೆ ಅವರನ್ನು ಬಿಟ್ಟರೆ ಅಂಥ ನಾಯಕರು ಬೇರೆ ಯಾರೂ ಸಿಕ್ಕುವುದಿಲ್ಲ. ನಮ್ಮಲ್ಲಿ ಕೆಲವು ದೊಡ್ಡ ದೊಡ್ಡ ಹೋಬಳಿಗಳಿವೆ. ಅಲ್ಲಿಂದ ಈ ಸಿನೀಮಾಗಳನ್ನು ನೋಡಲು ರಾತ್ರಿ ವೇಳೆಯಲ್ಲಿ ಹೆಂಗಸರು ಮಕ್ಕಳನ್ನು ಕಟ್ಟಿಕೊಂಡು 10-12 ಮೈಲಿ ಗಾಡಿಗಳಲ್ಲಿ ಬರಬೇಕೆಂದರೆ ಬಹಳ ಕಷ್ಟ. ಅಂಥ ಸ್ಥಳಗಳಿಗೆ ಸರ್ಕಾರದವರು ಯಾರೆ ಮುಂದೆಬರಲಿ ಅವರಿಗೆ ಸಿನೀಮಾ ಮಂದಿರಗಳನ್ನು ನಡೆಸಲು ಲೈಸೆನ್ಸ್ ಕೊಡಬೇಕೆಂದು ಹೇಳುತ್ತೇನೆ. ಶ್ರೀ ಕೆ. ದೇವಯ್ಯನವರು ಕೆಲವು ಸಿನೀಮಾ ಮಂದಿರಗಳಲ್ಲಿ ಕಕ್ಕಸಕ್ಕೆ ಹೋದರೆ ಅಲ್ಲಿ ನೀರೇ ಇರುವುದಿಲ್ಲ ಎಂದು ಹೇಳಿದರು. ಇನ್ನು ಥಿಯೇಟರಿನಿಂದ ಹೊರಗಡೆ ಬಂದು ರಸ್ತೆಯಲ್ಲಿ ಜಲಬಾಧೆಗೆ ಹೋದರೆ ಅಲ್ಲಿ ಪೋಲೀಸಿನವರು ಕೇಸುಹಾಕುತ್ತಾರೆ. ಇನ್ನು ಸಿನೀಮಾಮಂದಿರಗಳಲ್ಲಿ ಬೀಡೀ ಸೇದಬಾರದೆಂಬ ನೇಮವಿದೆ. ಅಲ್ಲಿ ಯಾರೋ ಒಬ್ಬ ಬೀಡಿ ಸೇದಿದರೆ ಕತ್ತಲೆಯಲ್ಲಿ ಇನ್ಯಾರೋ ಒಬ್ಬನ ಮೇಲೆ ಕೇಸು ಹಾಕಿಬಿಡುತ್ತಾರೆ. ಇಂಥ ಅನೇಕ ತೊಂದರೆಗಳಿರುವುದರಿಂದ ಸಿನೀಮಾಕ್ಕೆ ಬರತಕ್ಕವರು ಈ ಜುಲ್ಮಾನೆ ಇತ್ಯಾದಿಗಳಿಗೆಲ್ಲ ದುಡ್ಡು ಕಟ್ಟಿಕೊಂಡು ಬರಬೇಕಾಗಿದೆ. ಈಗ ಇರತಕ್ಕ ನಮ್ಮ ಗೃಹ ಸಚಿವರ ಕಾಲದಲ್ಲಾದರೂ ನಮಗೆಲ್ಲ ನ್ಯಾಯ ದೊರೆತೀತೆಂದು ನಾನು ನಂಬಿದ್ದೇನೆ. ಬರಿ ಕಾನೂನನ್ನು ಮಾಡಿದರೇನು ಪ್ರಯೋಜನವಿಲ್ಲ. ಡೆಪ್ಯುಟಿ ಕಮಿಷನರುಗಳ ಹತ್ತಿರ ಈ ನಾನಫಿಷಿಯಲ್ ಜನರ ಸಂಪರ್ಕವಿಲ್ಲದಂತೆ ಇಲ್ಲವೆ ಇವರ ಮಾತನ್ನು ಅವರು ಕೇಳದಂತೆ, ಅವರ ಸ್ವಯಂಬುದ್ಧಿಯಿಂದ ಕೆಲಸ ಮಾಡುವಂಥ ಒಂದು ಅವಕಾಶವನ್ನು ಕಲ್ಪಿಸಿದರೆ ಆಗ ಈ ಕಾನೂನುಗಳೇನಾದರೂ ಸ್ವಲ್ಪ ಉಪಯೋಗಕ್ಕೆ ಬರಬಹುದು. ಕಾನೂನು ಮಾಡಿದಮೇಲೆ ಅವುಗಳನ್ನು ಸರಿಯಾಗಿ ಆಚರಣೆಗೆ ತರಬೇಕು.

ಎಂಟರ್‌ಟೇನುಮೆಂಟ್ ಟ್ಯಾಕ್ಸನ್ನು ಕೊಡಲು ಯಾವ ತರಹ ಲೆಕ್ಕಪತ್ರಗಳನ್ನು ಇಟ್ಟಿರುತ್ತಾರೆ, ಎಷ್ಟು ಉತ್ಪತ್ತಿ ಬರುತ್ತದೆ ಎನ್ನುವುದನ್ನೆಲ್ಲಾ ತನಿಖೆ ಮಾಡಲು ಎಷ್ಟು ಜನರಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡಿದ್ದೀರಾ? ಇದನ್ನೆಲ್ಲಾ ಸರಿಯಾಗಿ ಕಂಟ್ರೋಲು ಮಾಡುವವರು ಯಾರು? ಒಂದು ದಿವಸಕ್ಕೆ ಮೂರು ಪ್ರದರ್ಶನಗಳೆಂದು ನಡೆಸುತ್ತಾರೆ. ಅದೂ ನಮ್ಮ ಮಂಡ್ಯದಲ್ಲಿ ಆರು ಪ್ರದರ್ಶನಗಳನ್ನು ನಡೆಸುತ್ತಿದ್ದಾರೆ. ಇಲ್ಲಿ ಎಷ್ಟು ಉತ್ಪತ್ತಿ ಬರುತ್ತಿದೆ ಮತ್ತು ಎಷ್ಟು ಟ್ಯಾಕ್ಸು ವಗೈರೆ ಕೊಡುತ್ತಿದ್ದಾರೆ? ಚಲನಚಿತ್ರ ತರುವುದಕ್ಕಾಗಿ ಎಷ್ಟು ಖರ್ಚಾಗುತ್ತದೆ? ಎನ್ನುವುದನ್ನೆಲ್ಲಾ ನೋಡಬೇಕು. ನಮ್ಮ ಮಂತ್ರಿಗಳೇನೋ ಕಾನೂನು ಮಾಡುತ್ತಾರೆ. ಅವರು ಈ ಕಾನೂನನ್ನು ಸ್ಟಡಿ ಮಾಡಿಕೊಂಡು ಬಂದೇ ಇಲ್ಲಿಗೆ ತರುತ್ತಾರೆ. ಅದು ಹೇಗಾದರೂ ಪಾಸಾಗಲಿ ಎಂದು ನಾವೂ ಒಪ್ಪಿಗೆ ಕೊಡುತ್ತೇವೆ. ಟೂರಿಂಗು ಟಾಕೀಸುಗಳನ್ನು ಎಷ್ಟೋ ಜನ ನಡೆಸಿಕೊಂಡು ಹೋಗುತ್ತಿದ್ದಾರೆ. ಆದರೆ ಈಚೆಗೆ ಇದರ ಬಗ್ಗೆ ಒಂದು ಅಮೆಂಡುಮೆಂಟು ಆಗಬೇಕಾಗಿದೆ. ಅದರಂತೆ

(ಶ್ರೀ ಜೆ. ದೇವಯ್ಯ)

ಈ ಟೂರಿಂಗು ಟಾಕೀಸುಗಳನ್ನು ಜಿಲ್ಲಾ ಬೌಂಡರಿಯೊಳಗೆ ಹಾಗೂ ಮುನಿಸಿಪಲ್ ಬೌಂಡರಿಯೊಳಗೆ ಹಾಕಕೂಡದು ಎಂದು ಮಾಡಿರುವುದರಿಂದ ಎಷ್ಟೋ ಜನಕ್ಕೆ ತೊಂದರೆಯಾಗಿದೆ. ಈ ರೀತಿ ಇರುವುದು ಸರಿಯಲ್ಲ. ಅದಕ್ಕಾಗಿ ಈಗ ಆಗಿರುವ ಅಮೆಂಡುಮೆಂಟನ್ನು ಬದಲಾಯಿಸಿ ಇನ್ನು ಮುಂದೆ ಟೂರಿಂಗು ಟಾಕೀಸುಗಳನ್ನು ಮುನಿಸಿಪಲ್ ಬೌಂಡರಿಯೊಳಗೂ ನಡೆಸಲು ಅವಕಾಶ ಮಾಡಿಕೊಡಬೇಕೆಂದು ನಾನು ಸರ್ಕಾರವನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೆ ಟೂರಿಂಗು ಟಾಕೀಸನ್ನು ಕೊಟ್ಟವರಿಗೇ ಕೊಡುತ್ತಾರೆಯೇ ಹೊರತು ಇನ್ನು ಬೇರೆಯವರಿಗೆ ಕೊಡುವುದಿಲ್ಲ. ಯಾರಿಂದ ಶಿಫಾರಸು ಇಂತಹವರಿಗೆ ಕೊಡಬೇಕೆಂದು ಬರುತ್ತದೆಯೋ ಅಂತಹವರಿಗೆ ಕೊಡುತ್ತಾರೆಯೇ ಹೊರತು ಬೇರೆಯವರಿಗೆ ಉತ್ತೇಜನ ಕೊಡುವುದಿಲ್ಲ. ಇದನ್ನೆಲ್ಲಾ ನಮ್ಮ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿ ಎಲ್ಲರಿಗೂ ಸರಿಯಾಗಿ ನ್ಯಾಯ ದೊರಕಿಸಿಕೊಡುತ್ತಾರೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಮಾನ್ಯ ಗೃಹಸಚಿವರು ಮೈಸೂರು ರಾಜ್ಯದ ಚಲಚಿತ್ರಗಳ (ವಿನಿಯಮನ) ವಿಧೇಯಕವನ್ನು ಎಂದರೆ ಚಲನಚಿತ್ರ ಪ್ರದರ್ಶನಗಳನ್ನು ಹತೋಟಿ ಗೊಳಿಸುವುದು ಹಾಗೂ ಲೈಸನ್ಸನ್ನು ಕೊಡುವುದು ಇದಕ್ಕೆ ಸಂಬಂಧಪಟ್ಟ ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಕಾಲ ಬಹಳ ಕಡಮೆಯಿರುವುದರಿಂದ ನಾನು ಈ ಮಸೂದೆಯಲ್ಲಿ ಅಡಗಿರತಕ್ಕ ಎಲ್ಲ ಪ್ರಕರಣಗಳ ಬಗೆಗೂ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ವಿಷಯಗಳನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸಿನಿಮಾ ಪ್ರದರ್ಶನಗಳನ್ನು ನಿಯಂತ್ರಣಗೊಳಿಸತಕ್ಕ ಉದ್ದೇಶಗಳನ್ನು ಹೊಂದಿ ಇದನ್ನು ತಂದಿದ್ದಾರೆ. ಈ ಹೊಸ ಮಸೂದೆಯಲ್ಲಿ ಬೇರೆ ಬೇರೆಯ ಕಾನೂನುಗಳಲ್ಲಿ ಇದ್ದದ್ದನ್ನು ಕ್ರೋಡೀ ಕರಿಸಿ ಇಡೀ ರಾಜ್ಯಕ್ಕೇ ಒಂದು ಕಾನೂನನ್ನು ತರಬೇಕೆಂಬ ಉದ್ದೇಶದಿಂದ ಇದನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ನಮ್ಮ ಮಸೂದಾಕಾರರು ಬಿಲ್ಲನ್ನು ಡ್ರಾಫ್ಟ್ ಮಾಡುವಾಗ ಕಾಪೀ ಹೊಡೆಯುವುದರಲ್ಲಿ ಬಹಳ ಶೂರರು ಎಂದು ನನಗೆ ಕಾಣುತ್ತದೆ. ಇದರ ಬಗ್ಗೆ ಬೇರೆ ವಿಚಾರ ಮಾಡಬೇಕು ಎನ್ನುವುದೇ ಇಲ್ಲ. ಈ ಮಾತನ್ನು ಹೇಳಿದ್ದಕ್ಕಾಗಿ ಅವರು ನನ್ನನ್ನು ಕ್ಷಮಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ಮಸೂದೆಗಳನ್ನು ಮಾಡುವಾಗ ಮಕ್ಕೀಕಾಮಕ್ಕಿಯಂತೆ ಮಾಡುತ್ತಾರೆ. ಅಲ್ಲದೆ ಇದು ಹೇಗಾದರೂ ಚರ್ಚೆಗೆ ಇಲ್ಲಿಗೆ ಬರುತ್ತದೆ, ಅನಂತರ ಹೇಗಾದರೂ ಪಾಸಾಗುತ್ತದೆ ಎನ್ನುವುದೂ ಒಂದು ಕೃಪೆ. ನಮ್ಮ ಕಾನೂನಿನಿಂದ ದೇಶಕ್ಕೆಲ್ಲಾ ಅನುಕೂಲವಾ ಗುತ್ತದೆಯೇ? ಇವೊತ್ತಿನ ಸನ್ನಿವೇಶದಲ್ಲಿ ಹಿಂದೆ ಏನು ಕಾನೂನುಗಳಿದ್ದುವು, ಅವು ಸರಿಯಾಗಿ ಕಾರ್ಯಗತವಾಗುತ್ತಿದೆಯೇ ಎನ್ನುವುದನ್ನೆಲ್ಲಾ ನೋಡಿದ್ದಾರೆಯೇ? ಹಿಂದೆ ಆಗಿದ್ದ ಕಾನೂನು ಗಳಿಂದ ಏನೇನು ಕಷ್ಟಗಳು ಉಂಟಾಗಿದ್ದವು ಮತ್ತು ಆ ಕಷ್ಟಗಳನ್ನು ನಿವಾರಣೆ ಮಾಡಲು ಈ ಹೊಸ ಕಾನೂನಿನಲ್ಲಿ ಏನಾದರೂ ಏರ್ಪಾಡು ಮಾಡಿದ್ದಾರೆಯೇ ಎನ್ನುವುದನ್ನು ನೋಡಲು ನಾನೂ ಕೂಡ ಈ ಬಿಲ್ಲನ್ನು ಎರಡು-ಮೂರು ಸಲ ತಿರುವಿ ಹಾಕಿ ಓದಿದೆ. ಆದರೆ ಇದರಲ್ಲಿ ಒಂದು ಲೈಸನ್ಸನ್ನು ಕೊಡುವುದು, ಮತ್ತೆ ಇನ್ನೊಂದು ದಂಡವನ್ನು ಹೇಗೆ ವಿಧಿಸಬೇಕು ಎನ್ನುವುದನ್ನು ಹೇಳಿದೆ. ಇನ್ನು ಸರ್ಕಾರದವರು ಯಾವ ಯಾವ ಪ್ರದರ್ಶನಗಳಿಗೆ ವಿನಾಯತಿ ಕೊಡಬೇಕು ಎಂಬ ಬಗ್ಗೆ ಅಧಿಕಾರ ವನ್ನು ತಾವೇ ಇಟ್ಟುಕೊಂಡಿದ್ದಾರೆ. ಇದನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂದು ಒಂದು ಕಡೆ ಹೇಳುತ್ತೀರಿ, ಅದಕ್ಕೆ ತಕ್ಕಂತೆ ಅಧಿಕಾರವನ್ನು ಕೊಟ್ಟಿಲ್ಲ, ಅದಕ್ಕಾಗಿ ಹೆಚ್ಚಿನ ಅಧಿಕಾರ ವನ್ನು ಕೊಡದೇ ಹೋದರೆ ಹೇಗೆ ಎನ್ನುವ ಅಭಿಪ್ರಾಯವನ್ನು ಮಾನ್ಯ ಸಚಿವರು ಹೇಳಿದರು. ಹಾಗೆ ಅಧಿಕಾರವನ್ನು ಕೊಡುವುದು ಮತ್ತು ಸರ್ಕಾರ ಇಟ್ಟುಕೊಳ್ಳುವುದು ಒಂದು ಮಾತು. ಆದರೆ ಕಾನೂನನ್ನು ಉಪಯೋಗಿಸುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಉಪಯೋಗಿಸಿಕೊಳ್ಳುವುದು ಅಥವಾ ದುರುಪಯೋಗಪಡಿಸಿಕೊಳ್ಳುವುದು ಇನ್ನೊಂದು ಮಾತು. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮಾನ್ ಪರಮೇಶ್ವರಪ್ಪನವರು ಹೇಳಿದ ಹಾಗೆ, ಕಾರ್ಪೊರೇಷನ್ನುಗಳಿವೆ, ನಗರಸಭೆಗಳಿವೆ, ಪೌರ ಸಭೆಗಳಿವೆ ಹಾಗೂ ದೊಡ್ಡ ದೊಡ್ಡ ಪಂಚಾಯತಿಗಳಿವೆ. ಎಲ್ಲಿ ಜನ ಹೆಚ್ಚಾಗಿ ಸೇರಿ ಒಂದು ಜಾತ್ರೆ ಎಂದು ನಡೆಸುತ್ತಾರೋ ಅಲ್ಲಿ ಜನತೆಗೆ ಮನರಂಜನೆಗಾಗಿ ಟೂರಿಂಗು ಟಾಕೀಸುಗಳನ್ನು ತೆಗೆದು ಕೊಂಡು ಹೋಗಿ ಪ್ರದರ್ಶನಗಳನ್ನು ಹಾಕುತ್ತಾರೆ. ಕಾನೂನು ಮಾಡುವಾಗ ಇವನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳಬೇಕು. ಬೆಂಗಳೂರು ನಗರದಲ್ಲಿರತಕ್ಕ ಚಿತ್ರಮಂದಿರಗಳಿಗೆ ಎಲ್ಲಾ ಕಾನೂನು ಗಳು ನಿಯಮಗಳು ಅನ್ವಯವಾಗಬೇಕು ಎಂದು ಅದಕ್ಕೆ ಲೈಸನ್ಸ್ ಫೀಯನ್ನೂ ಹಾಕುತ್ತಿದ್ದಾರೆ. ಸಾಮಾನ್ಯ ನಗರಗಳಲ್ಲಿ ಹೇಗಿರಬೇಕು? ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ ಯಾವ ತರಹ ಇರಬೇಕು,

ಇದಕ್ಕೇನು ಕಾರ್ಯಕ್ರಮ ತೆಗೆದುಕೊಳ್ಳಬೇಕು, ಮುಂದೆ ಇದಕ್ಕೆ ಯಾವ ತರಹ ಲೈಸನ್ಸ್ ಫೀ ಇರಬೇಕು ಎನ್ನುವುದನ್ನೆಲ್ಲಾ ಈ ಮಸೂದೆಯಲ್ಲಿ ಅಡಕ ಮಾಡುವುದಕ್ಕೆ ಸಾಧ್ಯವೇ ಇಲ್ಲ. ನಾವು ಜನತಂತ್ರವನ್ನು ಒಪ್ಪುತ್ತೇವೆ. ಅದರಂತೆ ಅಧಿಕಾರಗಳನ್ನು ಜನರಿಗೆ ಹಂಚಿಹಾಕಬೇಕು. ಗ್ರಾಮ ಪಂಚಾಯಿತಿಗಳು ಹಾಗೂ ನಗರಸಭೆಗಳು ಇವೆ. ಅವರಿಗೇ ಹೆಚ್ಚಾಗಿ ಇದರ ಸುಖ ದುಃಖಗಳೆಲ್ಲಾ ಗೊತ್ತಾಗುವುದು. ಲೈಸನ್ಸನ್ನು ಕೊಡುವಾಗ ಇದು ಹೇಗೆ ನಡೆಯುತ್ತದೆ ಮತ್ತು ಅದರ ಸಾಧಕ ಬಾಧಕಗಳೇನು ಇದನ್ನೆಲ್ಲ ನೋಡಿಕೊಂಡು ಅವರು ಕೊಡುತ್ತಾರೆ. ಅವರನ್ನು ಕೇಳದೆ ಲೈಸನ್ಸನ್ನು ಕೊಟ್ಟರೆ ಈಗಾಗಲೇ ಶ್ರೀಮಾನ್ ದೇವಯ್ಯನವರು ಹೇಳಿದ ಹಾಗೆ ಅನೇಕ ತೊಂದರೆಗಳು ಅಡ್ಡ ಬರುತ್ತವೆ. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಲೈಸನ್ಸನ್ನು ಕೊಡಬೇಕೆಂದು ಹೇಳಿದರೂ ಅಂತಹವರಿಗೆ ಕೊಡದೆ ಇರುವಂತಹ ಸನ್ನಿವೇಶಗಳು ಬರುತ್ತವೆ. ಇದರ ಬಗ್ಗೆ ನಗರ ಸಭೆಗಳು ಕಾರ್ಪೊರೇಷನ್ನುಗಳನ್ನೇಕೆ ಕೇಳಬಾರದು ಎನ್ನುವುದನ್ನು ಜಾಯಿಂಟು ಸೆಲೆಕ್ಟು ಕಮಿಟಿಯವರು ವಿಚಾರ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮ್ಯಾಜಿಸ್ಟ್ರೇಟರು ನಿಯಂತ್ರಣ ಮಾಡುವ ಅಧಿಕಾರವನ್ನು ಹೊಂದಿ ಲೈಸೆನ್ಸ್‌ಗಳನ್ನು ಕೊಡುತ್ತಾರೆ. ಅವರ ಆರ್ಡರನ್ನು ರದ್ದುಪಡಿಸುವಾಗ ಅಂತಹ ಸಂದರ್ಭದಲ್ಲಿ ಅಪೀಲು ಮಾಡಿಕೊಳ್ಳಲು ಸರ್ಕಾರಕ್ಕೆ ಬರಬೇಕು ಎಂದು ಇದರಲ್ಲಿದೆ. ಇದು ಹೇಗಾಗುತ್ತದೆ ಎಂದರೆ, ಮಾನ್ಯ ಸದಸ್ಯರಾದ ಶ್ರೀಮಾನ್ ದೇವಯ್ಯನವರು ಹೇಳಿದ ಹಾಗೆ ಪ್ರಭಾವವಿರುವವರಿಗೆ ಮಾತ್ರ ಎಂದರೆ ಹೆಚ್ಚು ಬಸ್ಸು ಲೈನುಗಳು ಇರುವವರಿಗೇ ಬಸ್ಸು ಲೈನುಗಳು ಪುನಃ ಸಿಕ್ಕುವಂತೆ ಇಲ್ಲಿ ಲೈಸನ್ಸುಗಳು ಸಿಕ್ಕುತ್ತವೆ. ಅವರ ಸ್ಥಾನ ಮಾನವೇನು ? ಅವರುಗಳಿಗೆ ಇರಬೇಕಾದ ಅನುಭವವೇನು, ಇವೆಲ್ಲವನ್ನೂ ನೋಡಿಕೊಂಡು ಲೈಸನ್ಸನ್ನು ಕೊಡುವಾಗ ಕಾನೂನುಗಳನ್ನು ಅರ್ಥಮಾಡಿಕೊಳ್ಳಬೇಕು. ಇಂತಹ ಒಂದು ಕ್ಲಾಸನ್ನು ಇಡುವ ಬದಲು ಸ್ಪಷ್ಟವಾದ ಕೆಲವು ರೂಲ್ಸುಗಳನ್ನು ಮಾಡಬೇಕು. ಅದರಂತೆ ಎಷ್ಟು ಹಣ ಇದರಲ್ಲಿ ಬರಬಹುದು, ಇದನ್ನು ನಡೆಸುವವರ ಸ್ಥಾನ ಮಾನವೇನು ಮತ್ತು ಹಿಂದೆ ಪಡೆದಿರುವ ಅನುಭವವೇನು?, ಇಂತಹವರಿಗೆ ಸಿನಿಮಾ ಮಂದಿರಕ್ಕಾಗಿ ಲೈಸನ್ಸನ್ನು ಕೊಡಲು ಅವಕಾಶ ಕೊಟ್ಟರೆ ಇದು ಚೆನ್ನಾಗಿ ಕೆಲಸ ಮಾಡುತ್ತದೆಯೇ ? ಇತ್ಯಾದಿ ವಿವರಗಳನ್ನೆಲ್ಲಾ ಪಡೆಯಲು ಈ ಊರಿನಲ್ಲಿರುವ ಜನ ಬೇರೆ ಯಾರಾದರೂ ಸಿನಿಮಾ ಮಂದಿರವನ್ನು ತೆರೆಯಬೇಕೆಂದು ಹೇಳಿದರೆ ಅದನ್ನೂ ಗಣನೆಗೆ ತೆಗೆದುಕೊಳ್ಳಬೇಕು.

ಆದ್ದರಿಂದ ಇದು ಅಷ್ಟು ಸಾಧುವಾದುದಲ್ಲ ಮತ್ತು ಯಾವ ಆಧಾರದ ಮೇಲೆ ಲೈಸೆನ್ಸುಗಳನ್ನು ಕೊಡಬೇಕು ಎನ್ನುವುದರ ಬಗ್ಗೆ ಈ ಮಸೂದೆಯಲ್ಲಿ ಸ್ಪಷ್ಟವಾಗಿ ಮತ್ತು ಖಚಿತವಾಗಿ ಸೂತ್ರಗಳನ್ನು ಮತ್ತು ನಿಯಮಗಳನ್ನು ಇಲ್ಲಿ ಹೇಳುವುದಕ್ಕೆ ಸಾಧ್ಯವಾಗಿಲ್ಲ. ಈ ಕೊರತೆ ಇದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

5-30 P.M.

ಇನ್ನು ಸರ್ಕಾರದವರು ಯಾವ ಚಿತ್ರಪಟ ನೋಡಿಸಬಹುದು, ಯಾವುದನ್ನು ನೋಡಿಸಬಾರದು, ಯಾವುದನ್ನು ಹೊಂದಿರಬಹುದು, ಯಾವುದನ್ನು ಹೊಂದಿರಬಾರದು ಎಂದು ಆದೇಶಕೊಡಬಹುದು ಎಂದು ಹೇಳಿದ್ದಾರೆ. ಅಧಿಕಾರಿಗಳೂ ಕೆಲವು ಷರತ್ತುಗಳನ್ನು ಹಾಕಬಹುದು, ಹಾಗೂ ಸರ್ಕಾರವೂ ಕೆಲವು ನಿರ್ದೇಶನಗಳನ್ನು ಕೊಡಬಹುದು. ಸರ್ಕಾರದವರು ನೇರವಾಗಿ ಇಂಥಿಂಥ ಚಿತ್ರ ಪಟಗಳನ್ನು ಪ್ರದರ್ಶಿಸಬಹುದು, ಅಥವಾ ಪ್ರದರ್ಶಿಸಬಾರದು ಎಂದು ಹೇಳಬಹುದು. ಇದರಲ್ಲಿ ಒಂದು ವಿಷಯವನ್ನು ಮಾನ್ಯ ಸದಸ್ಯರೊಬ್ಬರು ಪ್ರಸ್ತಾಪ ಮಾಡಿದರು. ಕೆಲವು ಸಿನಿಮಾ ಮಂದಿರಗಳು ಸ್ವತಂತ್ರಿಸಿ ತಮಗೆ ಲಾಭದಾಯಕವಾಗಿ ಕಂಡು ಬಂದ ಸಿನಿಮಾ ಪಟಗಳನ್ನು ಪ್ರದರ್ಶಿಸುತ್ತವೆ ಎಂದು ಈಚೆಗೆ ನಮಗೆ ಗೊತ್ತಿರುವ ಹಾಗೆ ಕೆಲವು ಮಂದಿರಗಳು ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡುತ್ತಿಲ್ಲ ಎಂಬ ಒಂದು ದೂರು ಅಲ್ಲಲ್ಲಿ ಬಂದಿದೆ. ಇಂಥ ಸಂದರ್ಭಗಳಿದ್ದರೆ, ಸಿನಿಮಾ ಮಾಲೀಕರಿಗೆ ನಿರ್ದೇಶನಗಳನ್ನು ಕೊಡುವ ಒಂದು ಅಧಿಕಾರವನ್ನು ಸರ್ಕಾರ ಇಟ್ಟುಕೊಳ್ಳಬೇಕಾಗಿದೆ. ಆದರೆ ನಾನು ಮಾನ್ಯ ಸ್ನೇಹಿತರಾದ ಡಾ॥ ಐಕಳರವರ ಭಾಷಣವನ್ನು ಕೇಳಿದಾಗ, ನನಗೆ ಆಶ್ಚರ್ಯವಾಯಿತು. ಅವರು ಸಿನಿಮಾ ನೋಡುವುದರಿಂದ ನೀತಿ ಪತನವಾಗುತ್ತದೆಂದು ಹೇಳಿದರೆ, ಜನಗಳು ಏನು ಹೇಳುತ್ತಾರೆಂದರೆ ಅಸೆಂಬ್ಲಿಯಿಂದ ರಾಜಕಾರಣಿಗಳು ನೀತಿ ಕೆಟ್ಟರು ಎಂದು.

Mr. DEPUTY SPEAKER.—The Hon'ble Member can not speak disparagingly of this House, whatever the public may say.

ಶ್ರೀ ಎಸ್. ಗೋಪಾಲಗೌಡ.— ನಾನು ಈ ಸಭೆಗೆ ಅಗೌರವವಾದ ಅಭಿಪ್ರಾಯವನ್ನು ಹೇಳಲಿಲ್ಲ. ಅವರು ಸಿನಿಮಾ ನೋಡುವುದರಿಂದ ಜನ ನೀತಿ ಕೆಟ್ಟರು ಎಂದು ಹೇಳಿದರೆ, ಜನ ನಾವು ನೀತಿ

(ಶ್ರೀ ಎಸ್. ಗೋಪಾಲಗೌಡ)

ಕೆಟ್ಟು ಅಧೋಗತಿಗೆ ಹೋಗುತ್ತಿದ್ದೇವೆ ಎಂದು ಹೇಳುವ ಹಕ್ಕು ಅವರಿಗಿದೆ; ಅದು ಜನರ ಭಾವನೆ ಯಾರು ಅಧೋಗತಿಗೆ ಹೋಗಿದ್ದಾರೆ, ಯಾರು ನೀತಿ ಕೆಡುತ್ತಿದ್ದಾರೆ ಎಂದು ಹೇಳಲು ಅವರಿಗೆ ಹಕ್ಕಿದೆ; ಅದು ಅವರ ಅಭಿಪ್ರಾಯ, ನೀತಿ ಕೆಡುವುದಕ್ಕೆ ಸಿನಿಮಾ ಮಂದಿರಗಳಲ್ಲಿ ಅಷ್ಟು ಹೊತ್ತು ಜನ ಕುಳಿತು ಕೊಳ್ಳುತ್ತಾರೆಯೇ? ಸಿನಿಮಾ ನೋಡಲೇ ಬಾರದು ಅನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯವೇ? ಅದು ಅಷ್ಟಕ್ಕೆ ಇಲ್ಲಿ ಅಪ್ರಕೃತ. ಆದರೆ ಈ ಶೀಲ, ಅಶ್ಲೀಲ ಬಗ್ಗೆ, ಮನುಷ್ಯನ ಭಾವನೆ ವ್ಯಕ್ತಪಡಿಸುವ ಬಗ್ಗೆ, ನಾವು ಸ್ವಾತಂತ್ರ್ಯವನ್ನು ಮೊಟಕು ಮಾಡುತ್ತಾ ಹೋದರೆ, ಭೌತಿಕ ಶಾಸ್ತ್ರದಲ್ಲಿ ಕ್ರಿಯೆ ಮತ್ತು ಪ್ರತಿಕ್ರಿಯೆ, ಸಾಮ್ಯ ಮತ್ತು ವಿರೋಧ ಎಂದು ಹೇಗೆ ಹೇಳು ತ್ತಾರೆಯೋ ಹಾಗೆ ಮನಸ್ಸನ್ನು ಹೆಚ್ಚಾಗಿ ತುಳಿದದ್ದೆ ಆದರೆ, ಪ್ರತಿಕ್ರಿಯೆ ಜಾಸ್ತಿಯಾಗುತ್ತದೆ. ಸಿನಿಮಾಗಳನ್ನು ನೋಡಿ ಜನರು ನೀತಿ ಕೆಡುತ್ತಾರೆ, ಇವುಗಳ ಮೇಲೆ ಹತೋಟಿಯನ್ನು restrictions) ಹೆಚ್ಚಾಗಿ ಹಾಕಬೇಕು ಎಂಬ ಅಭಿಪ್ರಾಯ ಈ ಮಸೂದೆ ತಂದವರಿಗೆ ಇದೆಯೆಂದು ನಾನು ಭಾವಿಸುವುದಿಲ್ಲ.

ಸಿನಿಮಾ ಮಂದಿರಗಳನ್ನು ನಡೆಸಿಕೊಂಡು ಹೋಗುವ ಬಗ್ಗೆ ಸರಕಾರದವರೂ ನಿಯಮಗಳನ್ನು ಮಾಡಿದ್ದಾರೆ. ಮಾನ್ಯ ಸದಸ್ಯರುಗಳೂ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಸಿನಿಮಾಗಳಲ್ಲಿ ಸಾಕಷ್ಟು ಗಾಳಿ, ಬೆಳಕು ಇರಬೇಕು, ನೀರಿನ ಸೌಲಭ್ಯವಿರಬೇಕು. ಪಾಯಿಖಾನೆಗೆ ಕಕ್ಕಸುಗಳಿರ ಬೇಕು, ಮೂತ್ರಿಗಳಿರಬೇಕು, ಆಸನಗಳು ಹೇಗಿರಬೇಕು ಇವನ್ನೆಲ್ಲ ಹೇಳಿರುತ್ತದೆ, ಮತ್ತು ನಾವು ಆ ನಿಯಮಗಳನ್ನು ಪರಿಪಾಲಿಸಬೇಕೆಂದು ನಿರೀಕ್ಷಿಸುತ್ತೇವೆ. ಲೈಸೆನ್ಸು ಕೊಟ್ಟುಬಿಟ್ಟರೆ, ಆ ಮೇಲೆ ನಮ್ಮ ಗೃಹ ಸಚಿವರ ಸಿಬ್ಬಂದಿಯವರು, ಕಟ್ಟಳೆಗಳು, ಷರತ್ತುಗಳು ಯಾವ ತರಹ ಕಾರ್ಯಗತ ವಾಗುತ್ತವೆ ಅನ್ನುವುದನ್ನು ಪರಿಶೀಲನೆ ಮಾಡುವುದಕ್ಕೆ ಹೋಗುವುದಿಲ್ಲ. ಬಹುಶಃ ಶ್ರೀಮಾನ್ ಸೂರ್ಯನಾರಾಯಣರಾಯರು ಈ ಸಲಹೆ ಮಾಡಿದರು ಎಂದು ಕಾಣುತ್ತದೆ, ಲೈಸೆನ್ಸನ್ನು ಎಷ್ಟು ವರ್ಷಕ್ಕೆ ಬೇಕಾದರೂ ಕೊಡಿ, ಬೇಕಾದರೆ ಶಾಶ್ವತವಾಗಿ ಕೊಡಿ. ಒಂದು ವರ್ಷಕ್ಕೆ, ಆರು ತಿಂಗಳಿಗೊಮ್ಮೆ, ಸಿನಿಮಾ ಸ್ಥಳವನ್ನು ಪರಿಶೀಲನೆ ಮಾಡಿ ಅಲ್ಲಿ ಏನೇನಿದೆ, ಇಲ್ಲವೆಂದು; ನೋಡಿ ಕೆಲವು ಬಸ್ಸುಗಳಲ್ಲಿ ಫಸ್ಟ್-ಏಡ್ ಬಾಕ್ಸ್ ಎಂದು ಇರುತ್ತದೆ. ತೆಗೆದು ನೋಡಿದರೆ, ಅದು ಖಾಲಿ ಪೆಟ್ಟಿಗೆ ಯಾಗಿರುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಬೀಡಿ, ಸಿಗರೇಟು, ಬೆಂಕಿ ಪೊಟ್ಟಣ ಇರುತ್ತವೆ.

ಶ್ರೀ ಎಸ್. ಗೋಪಾಲ ಗೌಡ.— ಈ ತರಹ ಕೆಲವು ಅಲಂಕಾರಕ್ಕೆ ಇರುತ್ತವೆ. ಅದರ ಮೇಲೆ ಬೋರ್ಡು ಬಿಟ್ಟು ಇನ್ನೇನೂ ಇರುವುದಿಲ್ಲ. ''ಮೂತ್ರಿ'' ಒದಗಿಸಬೇಕು ಎಂದು ವಿಧಾಯಕ ಮಾಡಿರುತ್ತದೆ. ಸರಿ ಒಂದು ಜಾಗದಲ್ಲಿ ''ಮೂತ್ರಿ'' ಎಂದು ಬರೆದು ಬೋರ್ಡು ತಗಲಿ ಹಾಕಿರು ತ್ತಾರೆ. ಆದರೆ ಅಲ್ಲಿಗೆ ಯಾರಿಗೂ ಹೋಗುವುದಕ್ಕೆ ಸಾಧ್ಯವಿಲ್ಲ ಅದೇ ತರಹ ''ಕಕ್ಕಸು'' ಎಂದು ಬರೆದಿರುತ್ತಾರೆ. ಕಕ್ಕಸು, ಮೂತ್ರಿಗಳನ್ನು ಪ್ರೊವೈಡ್ ಮಾಡಬೇಕೆಂದು ಇದೆ; ಆ ರೀತಿಯಲ್ಲಿ ಮಾಡಿದ್ದಾರೆ. ವೆಂಟಿಲೇಷನ್ ಸರಿಯಾಗಿರಬೇಕೆಂದಿದ್ದರೆ, ಒಂದು ಸಣ್ಣ ಕಿಂಡಿ ಇಟ್ಟಿರುತ್ತಾರೆ. ಆಸನಗಳು ತಿಗಣೆಗಳಿಂದ ತುಂಬಿರುತ್ತವೆ. ಜನಗಳು ಎಷ್ಟು ಕೇಳುತ್ತಾರೆ? ಅವರಿಗೂ ಹೇಸಿಕೆ ಬಂದಿರುತ್ತದೆ. ಕಾನೂನನ್ನು ಕಾರ್ಯಗತ ಮಾಡುವ ಹೊಣೆ ಹೊತ್ತಿರತಕ್ಕ ಸಿಬ್ಬಂದಿಯವರು ಇದನ್ನು ತಿದ್ದಬೇಕು. ಅದಕ್ಕೆ ಪೀರಿಯಾಡಿಕಲ್ ಇನ್ ಸ್ಪೆಕ್ಷನ್ ಇರಬೇಕು ಅವರು ಆರು ತಿಂಗಳಿ ಗೊಂದು ಸಾರಿ ಮೇಲ್ವಿಚಾರಣೆ ನಡೆಸಿ ಏನೇನಿದೆ, ಏನೇನಿಲ್ಲ ಎಂದು ನೋಡಿ ದೂರು ಕೊಡಬೇಕು; ನೋಟಿಸು ಕೊಡಬೇಕು, ಸಿನಿಮಾ ಮಾಲಿಕ ಮಾಡಿದ್ದಾನೋ ಇಲ್ಲವೋ ಎಂದು ಮತ್ತೊಬ್ಬರು ಹೋಗಿ ನೋಡಬೇಕು; ಮಾಡಿದ್ದರೆ ಮಾತ್ರ ಲೈಸೆನ್ಸು ಮುಂದುವರಿಸಬೇಕು. ಇಂಥ ಕೆಲವು ಕ್ರಮಗಳನ್ನು ತೆಗೆದುಕೊಳ್ಳದೆ ಹೋದರೆ ಈ ಕಾನೂನು ಬರೀ ನಿಮ್ಮ ಕಾನೂನಿನ ಕಡತದಲ್ಲಿ ಇರುತ್ತದೆಯೇ ಹೊರತು, ಅದು ಕಾರ್ಯಗತವಾಗುವುದಿಲ್ಲ.

ನ್ಯಾಷನಲ್ ಆಂಥೆಮ್ ಪ್ರಾರಂಭವಾಗುವುದರಲ್ಲಿಯೇ ಜನ ಹೇಗೆ ಸಿನಿಮಾ ಮಂದಿರದಿಂದ ಹೊರಗೆ ಹೋಗ ತ್ತಾರೆಂದು ''ಲಕ್ಷ್ಮಣ್'' ಅವರು ಮೊನ್ನೆ ಪೇಪರಿನಲ್ಲಿ ಒಂದು ವ್ಯಂಗ್ಯ ಚಿತ್ರವನ್ನು ಬರೆದಿದ್ದಾರೆ. ಅದರಲ್ಲಿ ಸಿನಿಮಾ ಬಿಡುವ ಮುಂಚೆಯೇ ಒಬ್ಬ ಹೊರಗೆ ಓಡುವುದಕ್ಕೆ ಪ್ರಯತ್ನ ಪಡುತ್ತಾನೆ. ಆಗ ಗೇಟ್ ಕೀಪರು ''ನ್ಯಾಷನಲ್ ಆಂಥೆಮ್ ಪ್ರಾರಂಭವಾಗುವುದಕ್ಕೆ ಇನ್ನೂ ಸ್ವಲ್ಪ ಸಮಯವಿದೆ, ನಿನ್ನ ಜಾಗಕ್ಕೆ ಹೋಗು'' ಎಂದು ಹೇಳುತ್ತಾನೆ. ಈ ಚಿತ್ರದ ವ್ಯಂಗ್ಯ ಅರ್ಥ ಇಷ್ಟೆ ನ್ಯಾಷನಲ್ ಆಂಥೆಮ್ ಆಗುತ್ತದೆ ಅಂದರೆ, ಎಲ್ಲಿರುತ್ತಾರೆಯೋ ಅಲ್ಲಿಯೇ ಎದ್ದು ನಿಂತು ಕೊಂಡು, ತಲೆ ಬಗ್ಗಿಸಿ, ರಾಷ್ಟ್ರಕ್ಕೆ ಗೌರವ ಸಲ್ಲಿಸಬೇಕು. ಆದರೆ ಆ ಭಾವನೆ ನಮ್ಮ ಜನಕ್ಕಿಲ್ಲ ಎಂಬ

ಅಭಿಪ್ರಾಯ ಬರುವ ಹಾಗೆ ಬರೆದಿದ್ದಾರೆ. ನ್ಯಾಷನಲ್ ಅಂಥೆಮ್ ಪ್ರಾರಂಭವಾದೊಡನೆ ಕದಲದೆ ನಿಂತು ಬರಬೇಕು ಎನ್ನುವುದು ಒಂದು ಸಂಕೇತ. ಆದರೆ ನಮ್ಮವರು ಓಡಿ ಹೋಗುತ್ತಾರೆ. ಕಾನೂನು ದೃಷ್ಟಿಯಿಂದ ಸಿಬ್ಬಂದಿಯವರು ಚಾಟಿ ಉಪಯೋಗಿಸಿ, ಬಲಾತ್ಕಾರದಿಂದ ನಮ್ಮ ಜನರನ್ನು ಶಿಸ್ತಿನ ಸಿಪಾಯಿಗಳನ್ನಾಗಿ ಮಾಡುವುದು ಬಹಳ ಕಷ್ಟ. ಪ್ರತಿಯೊಂದಕ್ಕೂ, ಪ್ರಚಾರ ಮಾಡಬೇಕಾಗುತ್ತದೆ. ಈ ಅನೇಕ ಕಾಯಿದೆಗಳನ್ನು ನಾವು ಜಾರಿಗೆ ತರುವಾಗ, ಜನರು ಹೇಗೆ ನಡೆದುಕೊಳ್ಳಬೇಕೆಂದು ತಿಳಿಸಿ, ಎಜುಕೇಟ್ ಮಾಡಬೇಕು. ಹಾಗೆ ತಿಳಿಸುವುದರ ಮೂಲಕ ಕಾನೂನನ್ನು ಯಶಸ್ಸಿಗೊಳಿಸಬಹುದು. ಈ ದಿಕ್ಕಿನಲ್ಲಿ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† **Sri L. B. BIRJE** (Khanapur).—[Spoke in Marathi].

Sri R. M. PATIL.—Mr. Speaker, Sir, various suggestions have been thrown during the debate. If we consider the necessity of uniformity of law from the point of view of development of this industry, we have to take into consideration not only the encouraging factor to develop this industry but also to curb the misuse and have an effective legislation. Therefore, it naturally restricts certain rights of citizens in the field of this business in the matter of selection of place for a cinema house and so on. It restricts the number of persons who are eager to hold licence also in a particular area. Thirdly, it restricts the transfer or the acquisition of such licences. Whether these restrictions are reasonable or not is a point for consideration. Another aspect of it is, whether all the requirements to regulate this industry should be embodied in the Act itself or certain requirements are to be provided in the rules. The provisions of this Bill provide for the necessary requirements for conducting this business and give scope for regulations and rules. Those rules are to be placed before the House for approval. Some Hon'ble Members contended that this Bill should be an Encycllopedæ for all the activities of this industry, in the mater of selection of the place, the type of building, the type of design and so on and so forth. Well, Sir, with all humility I submit that it is not possible to do so nor is it practicable. A law should be a comprehensive one. Though this Bill consists of only 21 clauses, it is sufficient for the purpose of regulating the cinemas in this State.

Coming to the difficulty that some of my friends expressed in regard to the applicability of this law to touring talkies, I would refer them to sub-clause (1) of clause 2.

"cinematograph" includes any apparatus for the representation of moving pictures or series of pictures.

"place" includes a house, building, tent and any description of transport – whether by water, land or air."

If both these sub-clauses are read together, there is no room for doubt that touring talkies come within the purview of this Bill.

As regards the licensing authority, this Bill provides that the D.C. shall ordinarily be construed as District Magistrate for the purpose of its implementation. But circumstances may require the Government to authorise some other officer. Say in a place like Sharavati or K.G..F

(SRI R. M. PATIL)

where there is a floating population or peculiar circumstances exist, the Government may authorise an officer on-the-spot to grant licence and regulate and control cinema shows. Government should have this power.

Clauses 5 and 4 are a bit confusing and need attention at the hands of the Select Committee. This is in regard to appeal and the question is whether clause 4 or 5 is to be controlled by clause 9.

Clause 8 deals with transfers of licences. If it is read independently, it appears as though there is some sort of discrimination but matters would become clear if it is read with clause 6, which lays down the various considerations that ought to weigh with the licensing authority for the purpose of granting a licence. Both the transferor and transferee are on par. In the case of the transferor, who is the prime licencee, two conditions should be satisfied: whether he is a man of status and whether he has experience. Similarly in the case of the transferee, the same considerations weigh. This has been stated clearly though in a negative form. It contemplates the same requisites to acquire a licence. Therefore, in my humble submission there is no discrimination placed even in repect of a transferee, as stated in sub-clause (2) of clause 8.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ ಈ ಮಸೂದೆಯಲ್ಲಿರುವ status ಮತ್ತು previous experience ಈ ಪದಗಳಿಗೆ definite ಅರ್ಥ ಕೊಡದೇ ಹೋದರೆ ಹೊಸದಾಗಿ ಲೈಸನ್ಸ್ ಪಡೆಯಲು ಕಷ್ಟವಾಗುವುದಿಲ್ಲವೇ ?

Sri R. M. PATIL.—It is a matter to be noted. It is a matter of detail and that can be provided for in the rules.

I would now speak about the penalties. The cinema industry is growing. People have developed a taste and a fancy to cinema. Some people are always worried as to when a cinema would start. It has become a place of attraction and necessarily such a place, where a large number of people visit, should be kept clean and in a decent way. It requires a lot of vigilance to ensure these two factors. Government has an interest in seeing that atleast in big towns, in district headquarters and commercial towns, and in the capital, the cinema houses are provided with modern amenities and have the necessary equipment and convenience. Keeping this in view, Government have recently sanctioned a number of cinema houses in order to see that they are befitting to the status and beauty of Bangalore. I entirely agree with the Members when they say that cinema houses should be clean and decent. There is no difference of opinion on that point. Government wants the same thing, the visitors to cinema want the same thing. But what are we to do if the exhibitor defies the law.? We should not stop with mere preaching. He must be taken to task. Unless there is an apprehension in his mind that if he disobeys the law, he will be punished, he would not obey the law. Such a law which does not provide for deterrents would have no sanctity or effectiveness. Therefore instead of making this law a piece of literature containing sermons and platitudes, I request the Hon'ble Members to

consider whether it should not contain stringent provisions to punish wrong-doers and whether the law should not be enforced rigorously. Otherwise it would have no life.

Some of my friends expressed keenness in developing the film industry. Government is equally anxious on this score.

Sri V. S. PATIL.—Sir, the time is up.

Sri A. P. APPANNA.—Sir, I move that the time may be extended by ten minutes.

Mr. DEPUTY SPEAKER.—Is it the pleasure of the House to grant an extension of 10 minutes. ?

HON'BLE MEMBERS.—Yes.

6-00 P.M.

Sri R. M. PATIL.—Mysore State is lagging behind in the development of film industry. It has its own drawbacks; that we cannot deny. Even though it is unified, still in the case of administration of films it is divided. Hyderabad Karnatak is controlled by one regional officer Bombay-Karnatak is controlled by another regional officer and old Mysore is controlled by a third regional officer. Still in the case of administration of films, it is divided into three parts. It is still to be amalgamated. That is one aspect. Another aspect is that the area is too small. If we consider from the economic point of view the area of operation for a Kannada film is not enough so as to bring profits to the producers. So, what the producers are doing is this. They are trying their level best, but at the same time they are not able to make both ends meet. It has got its own drawbacks.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಳ್ಳೆಯ ಸ್ಟುಡಿಯೋ ಮೈಸೂರು ದೇಶದಲ್ಲಿಲ್ಲ ಎಂಬುದೂ ಒಂದು ಮುಖ್ಯವಾದ ಕಾರಣವಲ್ಲವೇ ?

Sri R. M. PATIL.—The point is, one should know, that the Government cannot establish a Studio. Government may, at the most, help those who try to establish Studios, either by giving loan or giving some concessions in taking snaps. But the point is, industry must grow not merely from the point of view of industry or entertainment Act, but from the point of view of Kannada Culture, Kannada art and Kannada Sahitya. It is the bounden duty of the State Government It is considering to help the film industry to see that this industry thrives in this State. Therefore, my submission is that the suggestions that are thrown by the Hon'ble Members and that are relevant, will be taken into consideration, and those that are exaggerated and those that create difficulty, will be left to the Members of the Select Committee and ultimately it is for them to consider.

Mr. DEPUTY SPEAKER.—The question is :

"That the Mysore Cinemas (Regulation) Bill, 1962 be taken into consideration."

The motion was adopted.